ಬದ್ಧರಿದ್ದೇವೆ. ಇದರಲ್ಲೇನು ಬೇರೆ ಪ್ರಶ್ನೆ ಇಲ್ಲವೇ ಇಲ್ಲ. ಇಲ್ಲಿ ನಿಮ್ಮ ಸರ್ಕಾರ ಹಾಗೆ ಮಾಡಿತು, ನಮ್ಮ ಸರ್ಕಾರ ಹಾಗೆ ಮಾಡಿತು ಎನ್ನುವ ಚರ್ಚೆ ಇಲ್ಲವೇ ಇಲ್ಲ. ಇದರ ಬಗ್ಗೆ ಮುಂದೆ ಏನಾಗಬೇಕಾಗಿದೆ, ಏನು ಅನ್ಯಾಯ ನಡೆದಿದೆ, ಮತ್ತು ನ್ಯಾಯ ಮಂಡಳಿ ಬಗ್ಗೆ. ಇದರ ಬಗ್ಗೆಯೇ ಚರ್ಚೆಯನ್ನು ಮಾಡೋಣ.

ಅಧ್ಯಕ್ಷರು: ಮಾನ್ಯ ನಾಗರಾಜ್ ರವರೇ, ಅವರೇನೊ ಯೋಚನೆ ಮಾಡಿ ಹೇಳುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕಾವೇರಿ ಬಗ್ಗೆ ಚರ್ಚೆ ಮಾಡದೆ ಇಡೀ ರಾಜ್ಯದಲ್ಲಿ ಬೆಂಕಿ ಹತ್ತಿಕೊಂಡಿದೆ. ಕನ್ನಡಿಗರು ಮರಣ ಶಾಸನಕ್ಕೆ ಅರ್ಜಿ ಹಾಕಿದ್ದಾರೆ. ಇಂಥ ಸಂದರ್ಭದಲ್ಲೂ ಈ ರೀತಿ ಮಾಡಿದರೆ ಹೇಗೆ? ಅದಕ್ಕಾಗಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

ನಿಯಮ 69ರ ಮೇರೆಗೆ

ವಿಷಯ: ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರು ಬೆಳೆದ ಬೆಳೆಯನ್ನು ರಕ್ಷಿಸಲು ಮಾರ್ಚ್ 31ರ ವರೆಗೂ ಭದ್ರ ಜಲಾಶಯದಿಂದ ನೀರು ಬಿಡುವ ಬಗ್ಗೆ.

ಅಧ್ಯಕ್ಷರು: ಮಾನ್ಯ ಬಾದರ್ಲಿಯವರೇ, ಬೆಳೆ ನಷ್ಟವಾಗಿರುವ ಬಗ್ಗೆ ಎರಡು ನಿಮಿಷ ಹೇಳಿ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ತುಂಗಭದ್ರಾ ಅಣೆಕಟ್ಟಿನ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಯ ಹತ್ತು ಲಕ್ಷ ರೈತರಿಗೆ ನೀರಿನ ಬೇಸಿಗೆ ಬೆಳೆಗೆ ನೀರಿನ ಕೊರತೆಯಾಗಿದ್ದು ಈ ವಿಚಾರದಲ್ಲಿ ನಾನು ನಮ್ಮ ಮಾನ್ವಿ ಕ್ಷೇತ್ರದ ಶಾಸಕರಾದ ಮಾನ್ಯ ಭೋಸರಾಜ್ ಅವರು ನಮ್ಮ ಪಕ್ಷದ ಮುಖಂಡರು ಸರ್ಕಾರದ ಗಮನಕ್ಕೆ ತರುವ ಈ ಪ್ರಯತ್ನದಲ್ಲಿ ಇವತ್ತು ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ತುಂಗಭದ್ರಾ ಎಡದಂಡೆ ನಾಲೆಯ ವ್ಯಾಪ್ತಿಯಲ್ಲಿ ಸುಮಾರು ನಾಲ್ಕರಿಂದ ಐದು ಲಕ್ಷ ಎಕರೆ ಪ್ರದೇಶದಲ್ಲಿ ರೈತರು ಇವತ್ತು ಬೇಸಿಗೆ ಬೆಳೆಯನ್ನು ಹಾಕಿದ್ದಾರೆ. ಸುಮಾರು ಮೂರು ನೀರಾವರಿ ಸಲಹಾ ಸಮಿತಿಯ ಸಭೆಗಳನ್ನು ಮಾಡಿ, ಆ ಸಭೆಗಳಲ್ಲಿ ನೀರಿನ ಕೊರತೆಯ ಬಗ್ಗೆ, ತುಂಗಭದ್ರಾ ಎಡದಂಡೆ ನಾಲೆಯ ಆಧುನೀಕರಣದ ಬಗ್ಗೆ ಮತ್ತು ತುಂಗಭದ್ರಾದಲ್ಲಿ ಹೂಳು ತುಂಬಿರುವುದರ ಬಗ್ಗೆ ಅನೇಕ ವಿಷಯಗಳನ್ನು ಆ ಭಾಗದ ಸಚಿವರು,

ಚುನಾಯಿತ ಪ್ರತಿನಿಧಿಗಳು ಎಲ್ಲರೂ ಕೂಲಂಕಷವಾಗಿ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿ, ಕೊನೆಯ ಸಭೆ ಬೆಂಗಳೂರಿನಲ್ಲಿ 23ನೇ ತಾರೀಖು ನಡೆದಿತ್ತು. ಮಾನ್ಯ ಹಿರಿಯ ಸಚಿವರಾದಂತಹ ಎಂ.ಪಿ.ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ಜಲ ಸಂಪನ್ಮೂಲ ಸಚಿವರ ಸಮ್ಮುಖದಲ್ಲಿ ಸಭೆಯಲ್ಲಿ ಚರ್ಚೆ ಮಾಡಿ 9 ರಿಂದ 10 ಟಿ.ಎಂ.ಸಿ. ರಬಿ ಬೆಳೆಗೆ ನೀರಿನ ಕೊರತೆ ಇದೆ. ಆ ನೀರನ್ನು ಭದ್ರಾ ಅಣೆಕಟ್ಟಿನಿಂದ ಬಿಡಿಸಿ, ಬೇಸಿಗೆ ಬೆಳೆಗೆ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂಬುವಂತಹ ಒತ್ತಾಯವನ್ನು ಪಕ್ಷಾತೀತವಾಗಿ ನಾವೆಲ್ಲಾ ಚುನಾಯಿತ ಪ್ರತಿನಿಧಿಗಳು ಅವತ್ತು ಚರ್ಚೆ ಮಾಡಿದ್ದೆವು. ಆ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ಹಿರಿಯ ಸಚಿವರು ಇಲ್ಲ ಭದ್ರಾ ಆಣೆಕಟ್ಟಿನಲ್ಲಿ ಹೆಚ್ಚುವರಿ ನೀರು ಇದ್ದರೆ, ಆ ನೀರನ್ನು ಸಂಪೂರ್ಣವಾಗಿ ತುಂಗಭದ್ರಾಗೆ ಬಿಡಿಸಿ, ಬೇಸಿಗೆ ಬೆಳೆಗಳಿಗೆ ರಕ್ಷಣೆ ಮಾಡುತ್ತೇವೆ ಎಂಬಂಥ ಮಾತನ್ನು ಆ ಸಂದರ್ಭದಲ್ಲಿ ಹೇಳಿದ್ದರು. ನಾವೆಲ್ಲರೂ ಆ ಸಂದರ್ಭದಲ್ಲಿ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಜನವರಿ ತಿಂಗಳಲ್ಲೇ ನೀರನ್ನು ಬಿಡಬೇಕೆಂಬ ಒಂದು ಒತ್ತಾಯವನ್ನು ಮಾಡಿದ್ದೆವು. ಕಾರಣ ಏನೆಂದರೆ ಇವತ್ತು ಭದ್ರಾ ಜಲಾಶಯದಿಂದ ನೀರನ್ನು ಬಿಟ್ಟ ಮೇಲೆ ಕನಿಷ್ಟ ಒಂದು ವಾರವಾದರೂ ತುಂಗಭದ್ರಾಗೆ ನೀರು ಬಂದು ಸೇರುತ್ತದೆ. ಸುಮಾರು 10 ಟಿ.ಎಂ.ಸಿ. ನೀರು ಬಿಟ್ಟರೆ 4–5 ಟಿ.ಎಂ.ಸಿ. ನೀರು ಬಂದು ಸಂಗ್ರಹಣೆ ಆಗುತ್ತದೆ. ನಮಗೆ ಬೇಕಾಗಿರುವುದು 9 ರಿಂದ 10 ಟಿ.ಎಂ.ಸಿ. ನೀರು. ನೀವು ಅಷ್ಟು ಪ್ರಮಾಣದಲ್ಲಿ ನೀರು ಬಿಡದೇ ಇದ್ದರೆ ಪ್ರತಿ ಸೆಕೆಂಡ್ ಗೆ 3500 ಕ್ಯೂಸೆಕ್ಸ್ ನೀರು ಹರಿಸದಿದ್ದರೆ, 4.5 ಲಕ್ಷ ಎಕರೆಗೆ ನೀರು ಮುಟ್ಟಿಸುವುದಕ್ಕೆ ಸಾಧ್ಯನೇ ಇಲ್ಲ. ಈ ಎಲ್ಲಾ ವಿಚಾರಗಳನ್ನೂ ಆ ಸಂದರ್ಭದಲ್ಲಿ ಜಲ ಸಂಪನ್ಮೂಲ ಸಚಿವರ ಗಮನಕ್ಕೆ ತಂದಿದ್ದೇವೆ. ಸರ್ಕಾರದ ಗಮನಕ್ಕೆ ತಂದಿದ್ದೇವೆ. ಗಮನಕ್ಕೆ ತಂದು ಆ ಸಂದರ್ಭದಲ್ಲಿ ಮಾನ್ಯ ಸಚಿವರು ಕೂಡ ಭರವಸೆಯನ್ನು ಕೊಟ್ಟಿದ್ದರು. ಈ ಸಲ ಬೇಸಿಗೆ ಬೆಳೆಗೆ ನೀರಿನ ಕೊರತೆ ಆಗಲಾರದ ಹಾಗೆ ಬೆಳೆ ರಕ್ಷಣೆ ಮಾಡುತ್ತೇವೆ ಎಂಬುವಂತಹ ಒಂದು ವಿಚಾರವನ್ನು ಆ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದರು. ಇವತ್ತು ಏನಾಗಿದೆ? ಉಳಿದಿರುವುದು ಕೇವಲ ಇವತ್ತಿನ ಲೆಕ್ಕಾಚಾರದ ಪ್ರಕಾರ ಇನ್ನು 15 ರಿಂದ 20 ದಿವಸ ಮಾತ್ರ ನೀರು ತುಂಗ ಭದ್ರಾ ಜಲಾಶಯದಲ್ಲಿ ಇರುವುದು. ಭದ್ರಾ ಜಲಾಶಯದಲ್ಲಿ ಇವತ್ತು ನೀರು ಬಿಡಿಸದೇ ಇದ್ದರೆ, ಸುಮಾರು 300 ರಿಂದ 400 ಕೋಟಿ ರೂಪಾಯಿ ಮೂರು ಜಿಲ್ಲೆಗಳ ರೈತರು ಹಾಕಿರತಕ್ಕಂಥ ಬೆಳೆ ನಷ್ಟ ಆಗುವುದು ನಿಸ್ಸಂದೇಹ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಆ ಭಾಗದ ರೈತರು ಇರುವುದರಿಂದ ತಮ್ಮ ಮೂಲಕ

ಸರ್ಕಾರದ ಗಮನಕ್ಕೆ ತರಲು ಇಚ್ಛೆ ಪಡುತ್ತಿದ್ದೇನೆ. ಮಾನ್ಯ ಜಲಸಂಪನ್ಮೂಲ ಸಚಿವರು ಗಮನಿಸಿ. ಹೆಚ್ಚುವರಿ ನೀರು ಇದೆ. ಭದ್ರಾದಲ್ಲಿ ಸುಮಾರು 11 ರಿಂದ 12 ಟಿ.ಎಂ.ಸಿ ಹೆಚ್ಚುವರಿ ನೀರು ಇದೆ. ಆ ಭದ್ರಾ ಆಣೆಕಟ್ಟು ಕೂಡ ಕರ್ನಾಟಕ ರಾಜ್ಯದಲ್ಲಿದೆ. ತುಂಗ ಭದ್ರಾ ಆಣೆಕಟ್ಟು ಕೂಡ ಕರ್ನಾಟಕ ರಾಜ್ಯದಲ್ಲಿದೆ. ಕರ್ನಾಟಕ ರಾಜ್ಯದ ರೈತರ ಪರವಾಗಿ ನಾವು ನೀರು ಬಿಡಿ ಎಂದು ಕೇಳುತ್ತಿದ್ದೇವೆ. ಇವತ್ತು ಅವರು ಉತ್ತರದಲ್ಲಿ ಕೊಟ್ಟಿದ್ದಾರೆ. ಸುಮಾರು 3 ಟಿ.ಎಂ.ಸಿ. ನೀರು ಬಿಟ್ಟಿದ್ದೇವೆಂದು ಹೇಳುತ್ತಾರೆ. 3 ಟಿ.ಎಂ.ಸಿ ನೀರು ಬಿಟ್ಟರೆ 1 ಟಿ.ಎಂ.ಸಿ. ನೀರು ಬಂದು ಸಂಗ್ರಹಣೆ ಆಗಿದೆ. ಈ ತರಹ ಪರಿಸ್ಥಿತಿ ಆ ಭಾಗದಲ್ಲಿರುವುದರಿಂದ ಯಾವ ರೀತಿ ಕಾವೇರಿ ಬಗ್ಗೆ ಗಂಭೀರವಾಗಿ ಚಿಂತನೆ ಇದೆ, ಆ ರೀತಿಯ ಚಿಂತನೆ ಉತ್ತರ ಕರ್ನಾಟಕದ ಆಣೆಕಟ್ಟುಗಳ ಬಗ್ಗೆ, ಜಲಾಶಯಗಳ ಬಗ್ಗೆ, ಆಣೆಕಟ್ಟುಗಳ ಆಧುನೀಕರಣದ ಬಗ್ಗೆ ಮತ್ತು ಸಂಪನ್ಮೂಲವನ್ನು ಒದಗಿಸತಕ್ಕ ವಿಚಾರದಲ್ಲಿ ಈ ಗಂಭೀರ ಚಿಂತನೆಯನ್ನು ಕೂಡ ಮಾನ್ಯ ಜಲಸಂಪನ್ಮೂಲ ಸಚಿವರು ಮಾಡಬೇಕು ಎಂಬುವಂತಹ ಒಂದು ಒತ್ತಾಯವನ್ನು ಹೇಳಿ ತಾವು ಅಲ್ಪಾವಧಿ ಪ್ರಶ್ನೆಗೆ ನಮಗೆ ಅವಕಾಶ ಕೊಟ್ಟಿದ್ದಕ್ಕೆ ರೈತರ ಪರವಾಗಿ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಎಸ್.ಭೋಸರಾಜು(ಮಾನ್ವಿ):–ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಸ್ನೇಹಿತರು ಹೇಳಿದಂತೆ ಈ ವರ್ಷದಲ್ಲಿ ನವೆಂಬರ್ ತಿಂಗಳಲ್ಲಿ ಮಾನ್ಯ ಗೃಹ ಸಚಿವರ ಒಂದು ಅಧ್ಯಕ್ಷತೆಯಲ್ಲಿ ಬಳ್ಳಾರಿ, ಕೊಪ್ಪಳ, ರಾಯಚೂರು ಜಿಲ್ಲೆಯ ಎಲ್ಲಾ ಶಾಸಕರು ಸಭೆಯನ್ನು ನಡೆಸಿದೆವು. ಆ ಸಮಯದಲ್ಲಿ ಆಗಿರುವಂತಹ ಅಸೆಸ್‌ಮೆಂಟ್ ಪ್ರಕಾರ ಇವತ್ತು ನಮಗೆ 13 ಟಿ.ಎಂ.ಸಿ.ಯಷ್ಟು ನೀರಿನ ಕೊರತೆ ಬರುತ್ತದೆ ಎಂದು ಮಾತನಾಡಿದರು. ಆದರೆ ಎಷ್ಟರಮಟ್ಟಿಗೆ ನೀರನ್ನು ಬಿಡಿಸಬಹುದು? ಇಂತಹ ಸಂದರ್ಭಗಳಲ್ಲಿ ಅನೇಕ ಸಮಯದಲ್ಲಿ ನೀರನ್ನು ಬಿಡಿಸಿ ತುಂಗಭದ್ರಾ ಅಚ್ಚುಕಟ್ಟಿನಲ್ಲಿರತಕ್ಕಂಥ standing crop ಏನಿದೆ, ಆ ಕ್ರಾಪ್ ಗೆ ನಾವು ನೀರು ಒದಗಿಸಿರುವಂತಹ ಅನೇಕ ಸಂದರ್ಭಗಳು ಇರುವುದರಿಂದ ಅಂದಿನ ದಿನ ಹಿರಿಯರಾಗಿರತಕ್ಕಂಥ ಶ್ರೀಮಾನ್ ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ನಡೆದಿರತಕ್ಕಂಥ ಸಭೆಯಲ್ಲಿ ಭದ್ರಾ ಜಲಾಶಯದಿಂದ ಅಲ್ಲಿನ ರೈತರಿಗೆ ಬೇಕಾಗಿರತಕ್ಕಂಥ ನೀರನ್ನು ನಾವು ಲೆಕ್ಕ ಹಾಕಿ ಎಷ್ಟು ನೀರು ಉಳಿಯಬಹುದು ಎಂಬ ಮಾತಿನ ಪ್ರಶ್ನೆ ಬಂದಾಗ, 9 ಟಿ.ಎಂ.ಸಿ.ಯಷ್ಟು ನೀರು ಭದ್ರಾ ಜಲಾಶಯದಿಂದ ಅವರಿಗೆ ಬಿಡಲಿಕ್ಕೆ ಏನೂ ತೊಂದರೆ ಇಲ್ಲ ಎಂದು

ನಮ್ಮ ಅಧಿಕಾರಿಗಳು ಮತ್ತು ನಮ್ಮ ಶ್ರೀಮಾನ್ ಪ್ರಕಾಶ್‌ಜಿ ಅವರು, ಇತರ ಶಾಸಕರು ಸಹಿತ ನಾವು ಮಾತನಾಡಿದ್ದೇವೆ. ಈ ವಿಷಯವನ್ನು ನಾವು ಮುಂದುವರಿದು ನಮ್ಮ ನೀರಾವರಿ ಸಚಿವರ ಗಮನಕ್ಕೆ ತಂದಾಗ, ಅವರು ನಿಜವಾಗಿ ಉತ್ತಮ. ಉದ್ದೇಶದಿಂದ ಸ್ಪಂದಿಸಿ ತಕ್ಷಣ ನಿಮಗೆ ಯಾವುದೇ ಕಾರಣಕ್ಕೆ ತುಂಗಭದ್ರಾ ಅಚ್ಚುಕಟ್ಟಿನಲ್ಲಿರತಕ್ಕಂಥ ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿರತಕ್ಕಂಥ ರೈತರಿಗೆ ನೀರಿನ ತೊಂದರೆ ಆಗದಂತೆ ಪ್ರಯತ್ನ ಮಾಡುತ್ತೇನೆ, ಆದರೆ ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ನಡೆಯುತ್ತಿದೆ. ನಾವು ನೀವು ಎಲ್ಲರೂ ನಾಳೆ ಅಲ್ಲಿಗೆ ಹೋಗುವುದಿದೆ. ಚಾಮುಂಡೇಶ್ವರಿ ಕ್ಷೇತ್ರದ ಚುನಾವಣೆ ಮುಗಿಸಿಕೊಂಡು ಬಂದ ಮರು, ದಿವಸವೇ ನಾನು ಬಧ್ರಾ ಜಲಾಶಯದಲ್ಲಿತಕ್ಕಂಥ ರೈತರನ್ನು ಕರೆದು ಅವರನ್ನು ಒಪ್ಪಿಸಿ ಅಲ್ಲಿರತಕ್ಕ ನೀರನ್ನು ಬಿಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆ ಸಂದರ್ಭದಲ್ಲಿ record ಆಗಿದೆ, ನಾನು ಒಂದು ಮಾತನ್ನು ಹೇಳಿದೆ. ನನಗೆ ಇರತಕ್ಕ ಅನುಭವದಿಂದ ಹೇಳಿದೆ. ಏಕೆಂದರೆ ನಾನು ಎರಡು ಬಾರಿ ಕಾಡಾ ಛೇರ್‌ಮನ್ ಆಗಿ ತುಂಗಭದ್ರಾದಲ್ಲಿ ಅನೇಕ ಬಾರಿ ನೀರು ಬಿಡಿಸಿಕೊಂಡು ಬಂದಿರತಕ್ಕ ಸಮಸ್ಯೆ ಇರುವುದರಿಂದ ನಾವು ತಡವಾಗಿ ನೀರು ಬಿಟ್ಟರೆ 50% ಸಹಿತ recovery ಆಗುವುದಿಲ್ಲ. ಸುಮ್ಮನೇ ನದಿಯಲ್ಲಿಯೇ ಹೋಗುತ್ತದೆ. ಹಾಗಾಗಿ ಏನೇ ಇದ್ದರೂ ಸಹಿತ ನೀವು ಡಿಸೆಂಬರ್ ಒಳಗಾಗಿ 75% ನಮ್ಮ ತುಂಗಭದ್ರಾ reservoir ಗೆ ನೀರು ಸೇರುತ್ತದೆ. ದಯವಿಟ್ಟು ಆದಷ್ಟು ತೀವ್ರದಲ್ಲಿ ಆ ನೀರನ್ನು ಬಿಡಬೇಕು. ಅವತ್ತು ಏನು ನಮ್ಮ ಪ್ರಕಾಶ್‌ಜಿ ಅವರು ಅಸೆಸ್‌ಮೆಂಟ್ ಮಾಡಿರತಕ್ಕ ರೀತಿಯಲ್ಲಿ ಕನಿಷ್ಟ 9 ಟಿ.ಎಂ.ಸಿ ಅಷ್ಟಾದರೂ ನೀರು ಬಿಟ್ಟರೆ, ಇಲ್ಲಿ 6 ಟಿ.ಎಂ.ಸಿ ಆದರೂ ಸೇರಿದರೆ, 6 ಟಿ.ಎಂ.ಸಿ. ಅಂದರೆ ನಮಗೆ atleast 18 ದಿವಸಕ್ಕೆ ಮೂರು ಜಿಲ್ಲೆಗೆ ಸೇರಿರತಕ್ಕದ್ದು. ಏಕೆಂದರೆ 1 ಟಿ.ಎಂ.ಸಿ ಮೂರು ದಿವಸಕ್ಕೆ delivery ಮೂರು ಜಿಲ್ಲೆಗೆ ಆಗುತ್ತದೆ. ಹಾಗಾಗಿ ನಮಗೆ 18 ದಿವಸಕ್ಕೆ ನೀರು ಸಿಗಬಹುದು ಎನ್ನತಕ್ಕಂಥ ಮಾತನ್ನು ನಾವು ಆ ಸಂದರ್ಭದಲ್ಲಿ ಹೇಳಿದ್ದೇವೆ. ಆ ವಿಚಾರಕ್ಕೆ ಅವರು ಸ್ಪಂದಿಸಿ ಶ್ರೀಮಾನ್ ಈಶ್ವರಪ್ಪನವರು ತಪ್ಪದೇ ಆ ರೀತಿ ಮಾಡೋಣ, ಏನೂ ತೊಂದರೆ ಇಲ್ಲ ಎನ್ನುವಂತಹ ಮಾತನ್ನು ಹೇಳಿದರು. ಮುಂದುವರಿದ ನಂತರ ಬಳ್ಳಾರಿಗೆ ಮತ್ತು ಮುನಿರಾಬಾದ್‌ಗೆ ಬಂದಂತಹ ಸಂದರ್ಭದಲ್ಲಿ ಸಹಿತ ಅವರು ಯಾವುದಾದರೂ ತಮ್ಮ ಒಂದು ಲೆಕ್ಕದ ಪ್ರಕಾರ 23ನೇ ತಾರೀಖಿನವರೆಗೆ ಯಾವುದೇ ಕೊರತೆ ಇರಲಾರದ ಹಾಗೆ ನಾನು ನೀರನ್ನು ಕೊಡಿಸುತ್ತೇನೆ

ಎನ್ನುವಂತಹ ಮಾತನ್ನು ಮಾಧ್ಯಮದ ಮುಖಾಂತರ ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾವು ರೈತರಿಗೆ ಹೇಳಿದೆವು. ಹೆಚ್ಚಿನ ನೀರು ಬರುತ್ತದೆ ಎಂದು ನೀವು ಭರವಸೆ ಮಾಡುವುದು ಬೇಡ, ಈ ವರ್ಷ ಪರಿಸ್ಥಿತಿ ತುಂಗಭದ್ರಾ reservoir ನಲ್ಲಿ ಸರಿಯಾಗಿಲ್ಲ. ಹಾಗಾಗಿ ತಾವು ಏನಾದರೂ ನಾವು ಹೇಳಿರತಕ್ಕಂಥ ಮಾತುಗಳಿಗೆ ನೀವು paddy ಹಾಕುತ್ತಾ ಹೋದರೆ ಮುಂದೆ ನೂರಾರು ಕೋಟಿ ತೊಂದರೆ ಆಗತಕ್ಕ ಪರಿಸ್ಥಿತಿ ಆಗುತ್ತದೆ, ಹಾಗಾಗಿ ಕ್ರಾಪ್ ಹಾಕಬೇಡ ಎನ್ನತಕ್ಕ ಮಾತನ್ನು ಜವಾಬ್ದಾರಿಯುತವಾಗಿ ನಾವಂತೂ ಹೇಳಿದ್ದೇವೆ. ಆದರೆ ಕೆಲವು ಮಂದಿಗಳು ಏನು ಮಾಡಿದರು ಸಾರ್? ಯಾವಾಗ ಮಂತ್ರಿಗಳು 23ನೇ ತಾರೀಖಿನವರೆಗೆ ಹೇಳಿದ ಮೇಲೆ 31 ಆದಮೇಲೆ ನೀರು ಬಂದೇ ಬರುತ್ತದೆ. ಭದ್ರಾ ಜಲಾಶಯದಲ್ಲಿ ಸಾಕಷ್ಟು ನೀರು ಇದೆ. ಅಲ್ಲಿ ಏನೋ ರಿಪೇರಿ ಮಾಡುತ್ತಿದ್ದಾರೆ. ಅಲ್ಲಿನ ರೈತರಿಗೆ ನೀರಿನ ಅಷ್ಟು ಅವಸರ ಇರುವುದಿಲ್ಲ ಎಂದು ಹೇಳಿ ಈ ರೀತಿಯಾದಂತಹ ಒಂದು ಅಂದಾಜಿನ ಮೇಲೆ ರೈತರು ಇವತ್ತು ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆ ಒಳಗೆ ಹಾಕಿ ಬಿಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮೊನ್ನೆ ಇರಿಗೇಷನ್ ಡಿಪಾರ್ಟಮೆಂಟಿನವರು ಒಂದು ಅಸೆಸ್ ಮೆಂಟ್ ಮಾಡಿ 4ನೇ ತಾರೀಖಿನ ತನಕ ನೀರು ಬರುತ್ತದೆ ಎನ್ನುವ ಮಾತನ್ನು ಹೇಳಿದರು. ಆದರೆ ಮಂತ್ರಿಗಳು ಸಹಿತ ಅವರು ಹೇಳಿರತಕ್ಕ ರೀತಿಯಲ್ಲಿ ನಮ್ಮನ್ನು ಭೇಟಿ ಆಗಿರತಕ್ಕಂಥ ಸಂದರ್ಭದಲ್ಲಿ ಶ್ರೀಮಾನ್ ಈಶ್ವರಪ್ಪನವರು ಹೇಳಿದರು. ಹೇಳಿದ ಕೂಡಲೇ ನಾವು ಬಹಳ ಗಾಭರಿಯಾಗಿ ಅಧಿಕಾರಿಗಳಿಗೆ ಹೇಳಿ ಅಸೆಸ್ ಮೆಂಟ್ ಮಾಡಿರಿ ಎಂದು ಹೇಳಿದೆವು. ಶ್ರೀಮಾನ್ ಈಶ್ವರಪ್ಪನವರು ಹೇಳಿದ್ದಾರೆ. ಹೇಳಿದ ನಂತರ ಇವತ್ತು 22,700 ಕ್ಯೂಸೆಕ್ಸ್ ನೀರು left bank ನಲ್ಲಿದೆ. ಅತಿ ಮುಖ್ಯವಾಗಿರತಕ್ಕಂಥ ಮೂರು ಜಿಲ್ಲೆಗಳಲ್ಲಿ ಎಡದಂಡೆ ಮುಖ್ಯ ಕಾಲುವೆ, ಅದರಲ್ಲಿ ಕೊಪ್ಪಳ, ರಾಯಚೂರು ಜಿಲ್ಲೆಗೆ ಸೇರಿರತಕ್ಕಂಥದ್ದು ಮೂರೂವರೆ ಲಕ್ಷ ಎಕರೆ standing crop ಇವತ್ತು ಇದೆ ಮತ್ತು ಉಳಿದಂತಹ ಭಾಗ ಇವತ್ತು ಎಲ್.ಎಲ್.ಸಿ ನಲ್ಲಿ ಸ್ವಲ್ಪಮಟ್ಟಿಗೆ ಕೆಳಗೆ ಇರತಕ್ಕ ಬೆಳೆಗೆ, ಬಳ್ಳಾರಿ ಜಿಲ್ಲೆಯಲ್ಲಿ ಸಹಿತ ಇವರು ಕೊಡಬೇಕಾಗಿದೆ. ಮುಖ್ಯವಾಗಿ ಕೊಪ್ಪಳ, ರಾಯಚೂರಿಗೆ ಬರತಕ್ಕಂಥ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ನಮಗೆ ಕನಿಷ್ಪಪಕ್ಷ ಮಾರ್ಚ್ 31ನೇ ತಾರೀಖಿನ ತನಕ ಕೊಟ್ಟಿದ್ದರೆ ಮಾತ್ರ ಈ ಎರಡೂವರೆ ಲಕ್ಷ, ಮೂರು ಲಕ್ಷ ಎಕರೆಯಲ್ಲಿ ಸ್ವಲ್ಪ crop ಉಳಿಯುವುದಕ್ಕೆ ಸಾಧ್ಯತೆ ಇದೆ. ಎಲ್ಲಾ ಕ್ರಾಪನ್ನು ಉಳಿಸುವುದಕ್ಕೆ ಸಾಧ್ಯ ಇಲ್ಲ. ಆದರೆ ಅದು ಸರ್ಕಾರದ ಜವಾಬ್ದಾರಿನೂ ಆಗುವುದಿಲ್ಲ, ನಮ್ಮ

ಜವಾಬ್ದಾರಿನೂ ಆಗುವುದಿಲ್ಲ. ಆದರೆ ಇರತಕ್ಕದ್ದರಲ್ಲಿ ನಾವು 70% ಕ್ರಾಪನ್ನು ಉಳಿಸಬೇಕಾದರೆ ಮಾರ್ಚ್ 31ರವರೆಗೆ ಅವರಿಗೆ ನೀರು ಬೇಕಾಗುತ್ತದೆ. ಇದು ನಮ್ಮ ಡಿಮಾಂಡ್. ಈ ವಿಷಯದಲ್ಲಿ ನಾವೇನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ ತಕ್ಷಣ ಭದ್ರಾ ಜಲಾಶಯದಿಂದ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ? maximum ನೋಡಿ, ಇವತ್ತು 6–7 ಟಿ.ಎಂ.ಸಿ ಆದರೂ ನೀರು ಬಿಟ್ಟರೆ, ಒಂದು 4–5 ಟಿ.ಎಂ.ಸಿ. ನೀರು ಇಲ್ಲಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ. 7 ಟಿ.ಎಂ.ಸಿ ನೀರು ಅವರು ಬಿಟ್ಟಾಗ, ಅದು ಹೆಚ್ಚಿನ ರೀತಿಯಲ್ಲಿ 5,000 ಕ್ಯೂಸೆಕ್ಸ್ ನೀರು ಆಯಿತು. Last time ಏನು ಮಾಡಿದೆವು? 1500, 1000 ಎಂದು ಶುರು ಮಾಡಿ, 3500ರವರೆಗೆ ಬಿಡುವುದರಿಂದ 3 ಟಿ.ಎಂ.ಸಿ.ನೀರು ಬಿಟ್ಟಿದ್ದೇವೆ ಎಂದು ಹೇಳಿದರೂ ಸಹಿತ ಇಲ್ಲಿಗೆ ಒಂದೂವರೆ ಟಿ.ಎಂ.ಸಿ. ಬರಲಿಲ್ಲ. ಹೆಚ್ಚಿನ ಪ್ರಮಾಣದಲ್ಲಿ ಬಿಡುವ ಮುಖಾಂತರ ಹೆಚ್ಚಿನ ರೆಕವರಿ ಆಗಿ ತುಂಗಭದ್ರಾ reservoir ನಲ್ಲಿ ನಮಗೆ ಅನುಕೂಲ ಆಗುವಂತಹ ಒಂದು ಪರಿಸ್ಥಿತಿ ಇದೆ. ಹಾಗಾಗಿ ಇವತ್ತು ಈ ಸಂದರ್ಭದಲ್ಲಿ ಸರ್ಕಾರ ತಕ್ಷಣ ಕ್ರಮ ತೆಗೆದುಕೊಂಡು ಅಲ್ಲಿ ಬಿಡಬೇಕಾದಂತಹ ನೀರಿನ ಪ್ರಮಾಣವನ್ನು ತೀರ್ಮಾನ ಮಾಡಿ ಹೆಚ್ಚಿನ ಪ್ರಮಾಣದಲ್ಲಿ ಅಂದರೆ 5000 ಕ್ಯೂಸೆಕ್ಸ್ ನಂತೆ minimum discharge ಕನಿಷ್ಟ ಭಾಗದಲ್ಲಿ ನೀವು ಕೊಟ್ಟಿದ್ದರೆ ಮಾತ್ರ ಇಲ್ಲಿ ಏನಾದರೂ ಒಂದು 50 ರಿಂದ 60% ಬರಬಹುದು. ಇಲ್ಲಿ ನಮ್ಮಲ್ಲಿ ಪರಿಸ್ಥಿತಿ ಏನಾಗಿದೆ? ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ಅಂದರೆ ಇವತ್ತು 3500 ಕ್ಯೂಸೆಕ್ಸ್ ನೀರು ಮಿನಿಮಮ್ ಬಿಡಬೇಕಾಗುತ್ತದೆ. 3500 ಕ್ಯೂಸೆಕ್ಸ್ ಬಿಡತಕ್ಕದ್ದು ಇವತ್ತು ಪರಿಸ್ಥಿತಿ ಸರಿ ಇಲ್ಲ ಎಂದು ಹೇಳಿ ನಾವು 3200 ಕೊಡಬೇಕೆಂದು ಹೇಳಿ ನಾವು ICC ನಲ್ಲಿ ಕೇಳಿಕೊಂಡಿದ್ದೇವೆ. ಆದರೆ ಇವತ್ತು ನಮ್ಮ ಐಸಿಸಿ ಆದನಂತರ ನೋಟಿಫಿಕೇಶನ್ ಮಾಡಿರತಕ್ಕದ್ದು 2800 ರಂತೆ ಮಾರ್ಚ್ 31ರತನಕ ಕೊಡುತ್ತೇವೆಂದು ನೋಟಿಫಿಕೇಶನ್ ಮಾಡಿ ಅವರು ರೈತರಿಗೆ ಹಂಚಿದ್ದಾರೆ. ಆ 2800 ಸಹಿತ ಇವತ್ತು ನಮಗೆ ನೀರು ಬಿಡುತ್ತಿಲ್ಲ. 2600 ಕ್ಯೂಸೆಕ್ಸ್ ನೀರು ಮಾತ್ರ ಬಿಡುತ್ತಿದ್ದಾರೆ. ಅದರಿಂದ ಈ ಕೊನೆಯ ಭಾಗದಲ್ಲಿರತಕ್ಕಂಥ ಸಿಂಧನೂರಿನಿಂದ ಮಾನ್ವಿ ವಿಭಾಗದಲ್ಲಿರತಕ್ಕಂಥ ಪೈಪುಗಳಲ್ಲಿ ನೀರು ಹೋಗುತ್ತಿಲ್ಲ. ಹಾಗಾಗಿ ಈಗ ಬಿಡುವಂತಹ ನೀರಿನಿಂದ ನಮಗೆ ಸಾಕಷ್ಟು ತೊಂದರೆ ಆಗಿದೆ. ಇವತ್ತಂತೂ ಎಲ್ಲೂ ನೀರು ಪೋಲಾಗುತ್ತಿಲ್ಲ. 15–20 ದಿವಸದ ತನಕ ಏನು ನೀರು ಸ್ವಲ್ಪ ಮಟ್ಟಿಗೆ ನದಿ ಮುಖಾಂತರ ಹೋಯಿತು, ಕಳೆದ 20–25 ದಿವಸದಿಂದ ನೀರು ಕಡಿಮೆ ಆಗಿ

ನದಿ ಪಾತ್ರದಲ್ಲಿ ಹೋಗತಕ್ಕಂಥ ನೀರು ಸಹಿತ ಏನು ನಮ್ಮ ಮಾನ್ವಿ ಟೌನಿಗೆ ನಾವು lift irrigation ಮುಖಾಂತರ ಏನು ಕುಡಿಯುವ ನೀರು ಕೊಡಬೇಕು, ಅದಕ್ಕೆ ಇವತ್ತು ಒಂದು sand bags ಹಾಕಿ ನಾವು ನದಿಯಲ್ಲಿ ನೀರು ತೆಗೆದುಕೊಳ್ಳುತ್ತಿದ್ದೇವೆ. ಹಾಗಾಗಿ ಇವತ್ತು ಬಿಡತಕ್ಕ ಪ್ರಮಾಣ ಸಹಿತ ಕನಿಷ್ಟ 2900 ದಿಂದ 3000 ಕ್ಯೂಸೆಕ್ಸ್ ನೀರು ಆದರೂ ಬಿಡಬೇಕಾಗುತ್ತದೆ. ಏಕೆಂದರೆ ಒಂದು ಬೇಸಿಗೆ ಬಂದಿದೆ. ಎರಡನೆಯದು ಈಗ Paddy ಗೆ ತೆನೆ ಬಿಡತಕ್ಕ ಸಮಯ. ಆ ತೆನೆ ಬಿಡತಕ್ಕ ಸಮಯದಲ್ಲಿ ಹೆಚ್ಚಿನ ನೀರು ಅದಕ್ಕೆ ಬೇಕಾಗುತ್ತದೆ. ಹಾಗಾಗಿ ಈ ಪರಿಸ್ಥಿತಿ ಇರುವುದರಿಂದ ಪ್ರಮಾಣದ ಮಟ್ಟ ಸಹಿತ ಕನಿಷ್ಟ 3000 ಕ್ಯೂಸೆಕ್ಸ್ ನೀರು ಎಡದಂಡೆ ಮುಖ್ಯ ಕಾಲುವೆಗೆ ಬಿಟ್ಟರೆ ನಮಗೆ ಕೊನೆ ಭಾಗದಲ್ಲಿರತಕ್ಕ ರೈತರಿಗೆ ಏನಾದರೂ ನೀರು ಸಿಗಲಿಕ್ಕೆ ಸಾಧ್ಯತೆ ಇದೆ. ಸುಮ್ಮನೆ ನಾವು ನೀರು ಕೊಟ್ಟೆವು, 23ನೇ ತಾರೀಖಿನಿಂದ 31ನೇ ತಾರೀಖಿನವರೆಗೆ ಕೊಟ್ಟೆವು ಎಂದು ಹೇಳಿ 2600 ಕ್ಯೂಸೆಕ್ಸ್ ನೀರು ಬಿಟ್ಟರೆ, ಬಿಡುವುದರಿಂದ ರೈತರಿಗೆ ಉಪಯೋಗ ಆಗುವುದಿಲ್ಲ. ರೈತರಿಗೆ ಸಾಕಷ್ಟು ತೊಂದರೆ ಆಗುತ್ತದೆ. ಹಾಗಾಗಿ ಇವೆರಡನ್ನೂ ದಯವಿಟ್ಟು ಇವೆರಡನ್ನೂ ಪರಿಶೀಲನೆ ಮಾಡಿ. ಒಂದನೆಯದು, ಎಡದಂಡೆ ಮುಖ್ಯ ಕಾಲುವೆಯಲ್ಲಿ ಕನಿಷ್ಠ ಮೂರು ಸಾವಿರ ಕ್ಯೂಸೆಕ್ಸ್‌ಗಳಷ್ಟು ಪ್ರಮಾಣದಲ್ಲಿ ನೀರನ್ನು ಬಿಡಬೇಕು. ಎರಡನೆಯದು, ಭದ್ರಾ ಜಲಾಶಯದಿಂದ 1 tmc, 2 tmcಯಷ್ಟು ನೀರು ಬಿಟ್ಟರೆ, ಯಾವುದಕ್ಕೂ ಉಪಯೋಗವಾಗುವುದಿಲ್ಲ. ಅಲ್ಲಿರುವ ರೈತರಿಗೆ ತೊಂದರೆಯಾಗುತ್ತದೆ. ಇಲ್ಲಿಗೆ ಬಂದು ಸೇರುವುದಿಲ್ಲ. ಕಳೆದ 25 ವರ್ಷಗಳಲ್ಲಿ ನಮಗೆ ಆಗಿರುವ ಅನುಭವ ಇದು. ಹಾಗಾಗಿ, ಕನಿಷ್ಠ 6ರಿಂದ 7 tmcಯಷ್ಟಾದರೂ ನೀರು ಬಿಡುವ ಪ್ರಯತ್ನವನ್ನು ತಾವು ಮಾಡಿ. ಅದರಲ್ಲೂ 5ರಿಂದ 6 ಸಾವಿರ ಕ್ಯೂಸೆಕ್ಸ್‌ನಷ್ಟು ನೀರನ್ನು discharge ಮಾಡಿದರೆ ಮಾತ್ರ ಇಲ್ಲಿಗೆ 4 tmcಯಷ್ಟು ನೀರು ಬರಲು ಸಾಧ್ಯವಿದೆ. 4 tmcಯಷ್ಟು ನೀರು ಬಂದರೆ, 12 ದಿವಸಗಳಿಗೆ ಮಾತ್ರ ಸಿಗಲು ಸಾಧ್ಯವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ದಯವಿಟ್ಟು ಈಗಾಗಲೇ ಅಲ್ಲಿರುವ ಪರಿಸ್ಥಿತಿ ಏನೆಂಬುದು ತಮಗೆ ಗೊತ್ತಿದೆ. ಅಲ್ಲಿ canal ಒಡೆದಿರುವ ಸಂದರ್ಭದಲ್ಲಿ ತಾವು ಅಲ್ಲಿಗೆ ಬಂದು ನೋಡಿದಿರಿ. ಅಲ್ಲಿನ ರೈತರ ಪರಿಸ್ಥಿತಿ ಏನೆಂಬುದು ತಮಗೆ ಗೊತ್ತಿದೆ. ಶ್ರೀಮಾನ್ ಪ್ರಕಾಶ್‌ರವರೂ ಸಹ ಅನೇಕ ರೈತರೊಂದಿಗೆ ಮಾತನಾಡಿರತಕ್ಕಂಥಾದ್ದು ಅಲ್ಲಿರುವ ಬಳ್ಳಾರಿ canal ಆಗಲಿ, ಕೊಪ್ಪಳ, ರಾಯಚೂರಿಗೆ ಸೇರಿರುವ ರೈತರ ಬಗ್ಗೆಯಾಗಲಿ, ಮತ್ತು ಅಲ್ಲಿನ crop ಬಗ್ಗೆ ತಮಗೆ ಹೆಚ್ಚಿನ ಮಾಹಿತಿಗಳಿರುವುದರಿಂದ ತಾವು positive ಆಗಿ ರೈತರ

ಪರವಾಗಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡಿಸತಕ್ಕಂಥ ಪ್ರಯತ್ನವನ್ನು ತಕ್ಷಣ ಮಾಡಬೇಕಾಗಿದೆ. ತಡವಾದಷ್ಟು ನೀರು evaporation ಮತ್ತು transmission losses ಮುಖಾಂತರ ಅಲ್ಲಿನ ರೈತರಿಗೂ ಅನುಕೂಲವಾಗುವುದಿಲ್ಲ, ಇಲ್ಲಿರುವ ರೈತರಿಗೂ ಅನುಕೂಲವಾಗುವುದಿಲ್ಲ. ಹಾಗಾಗಿ, ತಾವು ತಕ್ಷಣ ನಿರ್ಣಯ ತೆಗೆದುಕೊಂಡು ನೀರು ಬಿಡಿಸುವಂಥ ಪ್ರಯತ್ನ ಮಾಡಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ತುಂಗಭದ್ರಾ ಎಡದಂಡೆ ಕಾಲುವೆಯ ರೈತನಾಗಿರುವುದಲ್ಲದೆ, tail end ರೈತನಾಗಿದ್ದೇನೆ. ಈಗಾಗಲೇ ಮಾನ್ಯ ಹಂಪನಗೌದರು ಮತ್ತು ಮಾನ್ಯ ಬೋಸರಾಜುರವರು ಮಾತನಾಡಿರುವಂತೆ ಈಗ ಎಲ್ಲವೂ ಗೊಂದಲ–ಮಯವಾಗಿದೆ. ಕೆಲವರು ಈ ತಿಂಗಳ ಫೆಬ್ರವರಿ 20ಕ್ಕೇ ಮುಗಿಸುತ್ತೇವೆಂದು ಹೇಳುತ್ತಿದ್ದರೆ, ಇನ್ನೂ ಕೆಲವರು ಮಾರ್ಚಿ 4ನೇ ತಾರೀಖಿಗೆ ಮುಗಿಯುತ್ತದೆ, ಆಗ ನೀರೇ ಬರುವುದಿಲ್ಲವೆಂಬ ಅಪಪ್ರಚಾರ ಮಾಡುತ್ತಿದ್ದಾರೆ. ಇದರಿಂದ ರೈತರಲ್ಲಿ ಗೊಂದಲ ಉಂಟಾಗಿರುವುದು ನಿಜ. ನಾವು ಸಭೆಯಲ್ಲಿ ನಿರ್ಣಯವನ್ನೂ ಕೂಡ ಮಾಡಿದ್ದೇವೆ. ಭತ್ತಕ್ಕೆ ನಾಟಿ ಹಾಕಿರುವುದನ್ನು ಸ್ವಲ್ಪ ಉಳಿಸಿದರೆ, ನಾವು ಹೇಗಾದರೂ tail endನಲ್ಲಿರುವ ರೈತರುಗಳೊಂದಿಗೆ ಸಹಕರಿಸಿ ಮೇಲ್ಭಾಗದಲ್ಲಿರುವ ರೈತರೆಲ್ಲರೂ ನಮ್ಮ ರೈತರೇ ಎಂದು ತಿಳಿದುಕೊಂಡು ನಾವೂ ಕೂಡ ಅವರಿಗೆ ಸಹಕಾರ ಕೊಡುತ್ತೇವೆ. ದಯಮಾಡಿ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಬಿಡಿಸಿ....ಎಲ್ಲಿ urgent ಆಗಿ ಬಿಡಬೇಕೋ, ಅಲ್ಲಿ ಲೇಟಾಗಿ ಬಿಟ್ಟರೆ, ಅಲ್ಲಿ ಲಾಭದಾಯಕವಾಗುವುದಿಲ್ಲ. ನನ್ನ ಮನವಿ ಕೂಡ ಇಷ್ಟೇ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ(ಜಲ ಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ,

ವಿಷಯ: ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರು ಬೆಳೆದ ಬೆಳೆಯನ್ನು ರಕ್ಷಿಸಲು ಮಾರ್ಚ್ 31ರವರೆಗೆ ಭದ್ರಾ ಜಲಶಯದಿಂದ ನೀರು ಬಿಡುವ ಬಗ್ಗೆ.

1. ತುಂಗಭದ್ರಾ ಜಲಾಶಯದಲ್ಲಿ 2006–07ನೇ ಸಾಲಿನ ನೀರಾರಿ ವರ್ಷದಲ್ಲಿ ಲಭ್ಯವಾಗುವ ನೀರಿನ ಪ್ರಮಾಣವನ್ನು 143.40 ಟಿ.ಎಂ.ಸಿ ಎಂದು ಲೆಕ್ಕ ಹಾಕಲಾಗಿದೆ. ಅದರಲ್ಲಿ ಕರ್ನಾಟಕದಲ್ಲಿ ಪಾಲಿನ ನೀರಿನ ಪ್ರಮಾಣ 94.015 ಟಿ.ಎಂ.ಸಿ ಆಗಿರುತ್ತದೆ.

2. ತುಂಗಭದ್ರಾ ಯೋಜನೆಯ ಅಡಿಯಲ್ಲಿನ ಕಾಲುವೆಗಳಲ್ಲಿ ರಾಜ್ಯವು ದಿನಾಂಕ:10.02.2007 ರವರೆಗೆ ಉಪಯೋಗಿಸಿರುವ ನೀರಿನ ಪ್ರಮಾಣ 84.137 ಟಿ.ಎಂ.ಸಿ ಹಾಗೂ ಉಳಿಕೆ ನೀರಿನ ಪ್ರಮಾಣ 9.878 ಟಿ.ಎಂ.ಸಿ.

3. ತುಂಗಭದ್ರಾ ಜಲಾಶಯದ ನೀರಾವರಿ ಸಲಹಾ ಸಮಿತಿಯ ನಿರ್ಣಯದಂತೆ ರಬಿ ಹಂಗಾಮಿಗೆ ಬೇಕಾಗಿರುವ ಒಟ್ಟು ನೀರಿನ ಪ್ರಮಣ 19.947 ಟಿ.ಎಂ.ಸಿ. ಆಗಿದ್ದು ಕಾಲುವೆಗಳಲ್ಲಿ ಹರಿಸಬೇಕಾದ ನೀರಿನ ಪ್ರಮಾಣ, ಅವಧಿ ಮತ್ತು ಅದಕ್ಕೆ ಬೇಕಾಗುವ ನೀರಿನ ಪ್ರಮಾಣ ಇಂತಿದೆ.

ಕ್ರ. ಸಂ.	ಕಾಲುವೆ	ನೀರಿನ ಪ್ರಮಾಣ ಮತ್ತು ಅವಧಿ	ಬೇಕಾಗುವ ನೀರಿನ ಪ್ರಮಾಣ (ಟಿ.ಎಂ.ಸಿ)
1	ತುಂಗಾಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆ	700 ಕ್ಯೂಸೆಕ್ಸ್ ನಂತೆ ದಿನಾಂಕ:31.03.2007 ರವರೆಗೆ	2.963
2	ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ	3500 ಕ್ಯೂಸೆಕ್ಸ್ ನಂತೆ ದಿ:31.03.2007 ರವರೆಗೆ	14.817
	ವಿಜಯನಗರ ಕಾಲುವೆ (ಎಡಭಾಗ)	100 ಕ್ಯೂಸೆಕ್ಸ್ ನಂತೆ ದಿ:10.04.2007ರಿಂದ 10.05.2007 ರವರೆಗೆ	0.267
3	ರಾಯ ಮತ್ತು ಬಸವಣ್ಣ ಕಾಲುವೆ	200 ಕ್ಯೂಸೆಕ್ಸ್ ನಂತೆ ದಿ:31.05.2007ರವರೆಗೆ	1.900
		ಒಟ್ಟು	**19.947**

ಹೀಗಾಗಿ 10.069 ಟಿ.ಎಂ.ಸಿ.ಯಷ್ಟು ನೀರಿನ ಕೊರತೆ ಉಂಟಾಗಿರುತ್ತದೆ.

4. ನೀರಾವರಿ ಸಲಹಾ ಸಮಿತಿಯ ನಿರ್ಣಯದಂತೆ ಹೊರಡಿಸಲಾದ ಅಧಿಸೂಚನೆಯ ಪ್ರಕಾರ ರಬಿ ಹಂಗಾಮಿನಲ್ಲಿ ಒಟ್ಟು 4.06 ಲಕ್ಷ ಎಕರೆ ಜಮೀನಿಗೆ ನೀರನ್ನು ಒದಗಿಸಬೇಕಿರುತ್ತದೆ. ಆದರೆ ರೈತರು ಬೆಳೆ ಉಲ್ಲಂಘನೆ ಹಾಗೂ ಅನಧಿಕೃತ ನೀರಾವರಿ ಮಾಡುತ್ತಿದ್ದು,

ಇದರಿಂದ ನೀರಿನ ಬಳಕೆ ನಿಗದಿತ ಪ್ರಮಾಣಕ್ಕಿಂತ ಅಧಿಕವಾಗಿರುತ್ತದೆ. ಬೆಳೆ ಉಲ್ಲಂಘನೆಯ ಪ್ರದೇಶ 1.47 ಲಕ್ಷ ಎಕರೆಗಳು ಮತ್ತು ಅನಧಿಕೃತ ನೀರಾವರಿ ಪ್ರದೇಶ 0.48 ಲಕ್ಷ ಎಕರೆಗಳು ಆಗಿರುತ್ತದೆ.

5. ಈ ಹಿಂದೆ ಆಶ್ವಾಸನೆ ನೀಡಿದಂತೆ, ತುಂಗಭದ್ರಾ ಅಚ್ಚುಕಟ್ಟಿನಲ್ಲಿ ಬೆಳೆದು ನಿಂತಿರುವ ಬೆಳೆಗಳನ್ನು ಸಂರಕ್ಷಿಸುವ ಸಲುವಾಗಿ ಭದ್ರಾ ಜಲಾಶಯದಿಂದ ಎರಡು ಹಂತಗಳಲ್ಲಿ ಒಟ್ಟು 3 ಟಿ.ಎಂ.ಸಿ. ನೀರನ್ನು ಈಗಾಗಲೇ ಹರಿಸಲಾಗಿರುತ್ತದೆ.
6. ಭದ್ರಾ ಜಲಾಶಯದ ಅಚ್ಚುಕಟ್ಟಿನ ಒಟ್ಟಾರೆ ನೀರಿನ ಅಗತ್ಯತೆಯನ್ನು ಪರಿಶೀಲಿಸಿ ಹೆಚ್ಚುವರಿ ನೀರಿನ ಲಭ್ಯತೆ ಇದ್ದಲ್ಲಿ ತುಂಗಭದ್ರಾ ಅಚ್ಚುಕಟ್ಟಿಗೆ ನೀರನ್ನು ಒದಗಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಕೂಡ ಇದೇ ರೀತಿ ನಮ್ಮ ಶಾಸಕರುಗಳು ಆ ಭಾಗದಲ್ಲಿ ಸಾಕಷ್ಟು ಸಮಸ್ಯೆಯುಂಟಾಗಿದೆ ಎಂದು ಹೇಳಿದಾಗ ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಬರುವಂತಹ ಅಲ್ಲಿನ ಶಾಸಕರುಗಳು, ಲೋಕಸಭಾ ಸದಸ್ಯರುಗಳು ಹಾಗೂ ರೈತ ಪ್ರಮುಖರು, ಇಬ್ಬರನ್ನೂ ಸೇರಿಸಿ, ಕೂರಿಸಿ, ಮಾತುಕತೆಯಾಡಿಸಿ, ಒಪ್ಪಿಸುವ ಮುಖಾಂತರ ಕಳೆದ ಬಾರಿ ಅವರಿಗೆ ತೃಪ್ತಿಯಾಗುವಷ್ಟು ನೀರನ್ನು ಬಿಡಲಾಗಿದೆ. ಆದರೆ, ಈ ಬಾರಿ ಏನು ಸಮಸ್ಯೆಯಾಗಿದೆ ಎಂದರೆ, ಕಳೆದ ಬಾರಿ ಎಷ್ಟು ನೀರು ಇತ್ತೋ, ಈಗ ಅಷ್ಟು ಇಲ್ಲದೇ ಇರುವುದಕ್ಕೋಸ್ಕರ ಈ ಸಮಸ್ಯೆಯಾಗಿದೆ. ಆದರೂ ಕೂಡ ನಾನು ಆ ಭಾಗದ ಶಾಸಕರು, ಲೋಕಸಭಾ ಸದಸ್ಯರುಗಳೊಂದಿಗೆ ಚರ್ಚೆ ಮಾಡಿದ್ದೇನೆ, ಎಷ್ಟು ಅನುಕೂಲ ಮಾಡುವುದಕ್ಕೆ ಸಾಧ್ಯವೋ, ಅಷ್ಟು ಅನುಕೂಲ ಮಾಡಿಕೊಡುವುದಕ್ಕೆ ನಾನು ಖಂಡಿತವಾಗಿಯೂ ಪ್ರಯತ್ನ ಮಾಡುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ:...ಏಕೆಂದರೆ, ನಮ್ಮ ಭಾಗದಲ್ಲಿ ರೈತರು ಇವತ್ತು ಬೆಳೆ ಉಳಿಸಿಕೊಳ್ಳಬೇಕೆಂದರೆ, ಕನಿಷ್ಠ ಇನ್ನು 3–4 TMCಯಷ್ಟಾದರೂ ನೀರು ಬೇಕೇ ಬೇಕು. ನೀರನ್ನು ಯಾವಾಗ ಬಿಡುತ್ತಾರೆ, ಎಂದು ಬಿಡುತ್ತಾರೆ, ಎಷ್ಟು ಪ್ರಮಾಣದಲ್ಲಿ ಬಿಡುತ್ತಾರೆ ಎಂಬುದರ ಬಗ್ಗೆ ನಿರ್ದಿಷ್ಟವಾಗಿ ಹೇಳಲಿಲ್ಲವೆಂದರೆ, ಅಲ್ಲಿನ ರೈತರು ಪುನ: ಗೊಂದಲದಲ್ಲಿ ಬೀಳುತ್ತಾರೆ. ಈ ಗೊಂದಲ ನಿವಾರಣೆಯಾಗಬೇಕೆಂಬ ಉದ್ದೇಶದಿಂದಲೇ ನಾವು ಇವತ್ತು ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಮಂತ್ರಿಗಳಾದ ಈಶ್ವರಪ್ಪನವರು ನೀರು

ಬಿಡಿಸುತ್ತೇವೆಂದು ಹೇಳಿದ್ದಾರೆ. ನೀರನ್ನು ಹಿಂದೆ ಬಿಟ್ಟಿದ್ದಾರೆ, ಮುಂದೆಯೂ ಬಿಡಬಹುದು. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ನಿರ್ದಿಷ್ಟವಾಗಿ ಎಷ್ಟು ಪ್ರಮಾಣದಲ್ಲಿ ನೀರನ್ನು ಬಿಡುತ್ತಾರೆ ಎಷ್ಟು? TMC ಬಿಡುತ್ತಾರೆ? ಆ ನೀರು ಭದ್ರಾ ಜಲಾಶಯಕ್ಕೆ ಯಾವಾಗ ಬಂದು ಸೇರುತ್ತದೆ? ಈ ಎಲ್ಲಾ ವಿಚಾರಗಳನ್ನು ಹೇಳಿದರೆ, ರೈತರು ಸ್ವಲ್ಪ ಆತಂಕ, ಗೊಂದಲದಲ್ಲಿರುವುದರಿಂದ ಅದು ನಿವಾರಣೆಯಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಸ್ಪಷ್ಟವಾದ ನಿರ್ಣಯಗಳನ್ನು, ನಿರ್ಧಾರಗಳನ್ನು, ನೀರು ಬಿಡತಕ್ಕಂಥ ದಿನಾಂಕ, ಎಷ್ಟು TMC, ಎಷ್ಟು ಕ್ಯೂಸೆಕ್ಸ್ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎನ್.ಎಸ್.ಬೋಸರಾಜು: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಧಿಕಾರಿಗಳು ಹೇಳಿರುವ ಮಾಹಿತಿಗಳ ಪ್ರಕಾರ, ಎಡದಂಡೆ ಮುಖ್ಯ ಕಾಲುವೆಗೆ ಮಾರ್ಚ್ 15ರವರೆಗೂ ನೀರು ಕೊಡಬಹುದೆಂದು ನಿಗದಿ ಪಡಿಸಿದ್ದಾರೆ. ಈಗ ನಮಗೆ ಕನಿಷ್ಠ ಬೇಕಾಗಿರುವುದು ಎಷ್ಟೆಂದರೆ, ಅವತ್ತು ನವೆಂಬರ್ ತಿಂಗಳಿನಲ್ಲಿ ನಿಮಗೆ ಹೇಳಿದ್ದು ಏನೆಂದರೆ, ಮಾರ್ಚ್ 31ರವರೆಗೂ ನೀರು ಕೊಡದೇ ಇದ್ದರೆ, ಯಾವುದೇ crop, ಅದು ಎಂತಹುದ್ದೇ crop ಇದ್ದರೂ, ಬರುವುದಿಲ್ಲ. ಹಾಗಾಗಿ, ನಾವು ಎಷ್ಟೇ ಕೊಟ್ಟರೂ ಅದನ್ನು ಗಮನದಲ್ಲಿಟ್ಟುಕೊಂಡು ಮಾರ್ಚ್ 31ರ ಕೊನೆವರೆಗೂ ಕನಿಷ್ಠ ಪ್ರಮಾಣದಲ್ಲಾದರೂ ನೀರು ಬಿಡತಕ್ಕಂಥ ರೀತಿಯಲ್ಲಿ ನಾವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ದಯವಿಟ್ಟು ಆದಷ್ಟು ತೀವ್ರವಾಗಿ ತಾವು ಆ ನಿರ್ಣಯ ತೆಗೆದುಕೊಂಡು ಎಷ್ಟು TMC ನಮಗೆ ಬೇಕಾಗುತ್ತದೆಂಬುದನ್ನು ನಾವು calculate ಮಾಡಬೇಕಾಗುತ್ತದೆ. ಮಾರ್ಚ್ 31ರವರೆಗೂ ಕನಿಷ್ಠ ನಾವು ಮುಟ್ಟಿಸಲೇಬೇಕಾಗುತ್ತದೆ. ಮುಟ್ಟಿಸದೇ ಇದ್ದರೆ, ನಾವು ಎಷ್ಟೇ ನೀರು ಕೊಟ್ಟರೂ ಉಪಯೋಗವಾಗುವುದಿಲ್ಲ. Crop ಹಾಳಾಗುತ್ತದೆ. ಕನಿಷ್ಠ 200ರಿಂದ 300 ಕೋಟಿ ರೂಪಾಯಿಗಳಷ್ಟು ರಾಯಚೂರು ಮತ್ತು ಕೊಪ್ಪಳ, ಈ ಎರಡೂ ಜಿಲ್ಲೆಗಳಲ್ಲಿ loss ಆಗುತ್ತದೆ. ಹಾಗಾಗಿ, ತಾವು ಆ ವಿಷಯವನ್ನು ಗಮನದಲ್ಲಿಟ್ಟುಕೊಂಡು ಎಷ್ಟು ನೀರು ಕೊಟ್ಟರೆ, ಇವತ್ತು ಆ crop ಉಳಿಸಬಹುದು ಮತ್ತು ಮಾರ್ಚ್ 31ರವರೆಗೂ ನೀರು ಹರಿಸತಕ್ಕಂಥ ಪ್ರಯತ್ನವನ್ನು ತಾವು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ: ಅಧ್ಯಕ್ಷರೆ, ಈಗ ಭದ್ರಾ ಜಲಾಶಯದಲ್ಲಿ ನೀರಿನ ಸಂಗ್ರಹಣೆ ಬಗ್ಗೆ ಇಲಾಖೆಯವರು ಕೊಟ್ಟಿರತಕ್ಕಂಥ ಅಂಕಿ-ಅಂಶಗಳು

ನಮ್ಮ ಹತ್ತಿರ ಇದೆ. ಇದರಲ್ಲಿ 15ನೇ ತಾರೀಖಿನವರೆಗೂ 15 tmcಯಷ್ಟು ನೀರು ಇದೆ. ಅವರಿಗೆ ಬೆಳೆಗೆ ಬೇಕಾಗಿರತಕ್ಕಂಥಾದ್ದು 38 tmc, 4 tmc drinking water, ಇನ್ನು 3 tmc dead storage ಆಗಿರುವುದರಿಂದ, ಇವೆಲ್ಲದಕ್ಕೂ ಉಪಯೋಗಿಸಿಕೊಳ್ಳುವ ಸಲುವಾಗಿ ಹೆಚ್ಚುವರಿಯಾಗಿ 11 tmcಯಷ್ಟು ನೀರು ಉಳಿಯುತ್ತದೆ. ದಯವಿಟ್ಟು ಮಾನ್ಯ ಮಂತ್ರಿಗಳು ಹೆಚ್ಚು ಗಮನಹರಿಸಿ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡಿಸುವ ಪ್ರಯತ್ನ ಮಾಡಿದರೆ, ಇರುವ ಬೆಳೆಗೆ ನೀರು ಕೊಟ್ಟಂತಾಗುತ್ತದೆ. ಇಲ್ಲದಿದ್ದರೆ, ನೀರು ಬಿಟ್ಟರೂ ಸಾರ್ಥಕವಾಗುವುದಿಲ್ಲ. Last time ಸಹ ನೀರು ಬಿಟ್ಟರು. ಯಾವಾಗ ಬಿಟ್ಟರು ಎಂದರೆ, ಮಾರ್ಚ್ ತಿಂಗಳ ಮಧ್ಯದಲ್ಲಿ ಬಿಟ್ಟರು. ಆ ನೀರು ಬಂದು ಸೀದಾ ಆಂಧ್ರ ಪ್ರದೇಶಕ್ಕೆ ಹೋಯಿತು. ಕರ್ನಾಟಕದ ರೈತರಿಗೆ ಏನೂ ಉಪಯೋಗವಾಗಲಿಲ್ಲ. ಆ ದೃಷ್ಟಿಕೋನವಿಟ್ಟುಕೊಂಡು ಕನಿಷ್ಠ 4ರಿಂದ 5 ಸಾವಿರದಷ್ಟು ಕ್ಯೂಸೆಕ್ಸ್ ನೀರನ್ನು ಪ್ರತಿನಿತ್ಯ ಬಿಟ್ಟು, ಅಷ್ಟು ನೀರನ್ನು ಇನ್ನೊಂದು ವಾರ, ಹತ್ತು ದಿವಸಗಳಲ್ಲಿ ಬಿಟ್ಟರೆ, ಮಾರ್ಚ್ 31ರವರೆಗೂ ರೈತರಿಗೆ ಬೆಳೆ ಬರುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ, ಸುಮಾರು 300ರಿಂದ 400 ಕೋಟಿ ರೂಪಾಯಿಗಳಷ್ಟು ನಷ್ಟವಾಗುವುದು ನಿಸ್ಸಂದೇಹವಾಗಿದೆ. ಆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಮಂತ್ರಿಗಳು ತಮ್ಮ ಉತ್ತರ ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಅಧ್ಯಕ್ಷರೆ, ಗದಗ್–ಬೆಟಗೇರಿ ನಗರಕ್ಕೆ ಕುಡಿಯುವ ನೀರಿನ ಸಲುವಾಗಿ ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ಪ್ರತಿ ವರ್ಷವೂ ನೀರು ಬಿಟ್ಟಿದ್ದೀರಿ. ಈಗ ಗದಗಕ್ಕೆ ನೀರು ಬಂದು 15 ದಿವಸಗಳಾದವು. ನಮ್ಮ ಡಿ.ಸಿ.ಯವರು ಚಿಕ್ಕಮಗಳೂರಿನ ಡಿ.ಸಿ.ಯವರನ್ನು, ನಿಮ್ಮ Government ಅನ್ನೂ ಕುಡಿಯುವ ನೀರನ್ನು ಬೇಗ ಬಿಡಿ ಎಂದು ಕೇಳಿದ್ದಾರೆ. ಮಾನ್ಯ ಧರ್ಮಸಿಂಗ್ ಸಾಹೇಬರು ಇದ್ದಾಗ ಹಿಂದೆ ಒಂದು Government Order ಆಯಿತು. Irrigation Departmentನಿಂದ ನಾವು ಒಂದು ಆರ್ಡರ್ ಮಾಡಿಸಿದೆವು. ಕುಡಿಯುವ ನೀರಿನ ಸಲುವಾಗಿ ಚಿಕ್ಕಮಗಳೂರಿನ ಡಿ.ಸಿ.ಯವರನ್ನು ಕೇಳಿದ ಕೂಡಲೇ immediate ಆಗಿ ಒಂದು meeting ಮಾಡಿ, "ನೀವು ನೀರು ಬಿಡ್ರಿ, ನೀವು ಸರ್ಕಾರಕ್ಕೆ refer ಮಾಡುವ ಅವಶ್ಯಕತೆಯಿಲ್ಲ"ವೆಂದು ಸರ್ಕಾರದವರು S.E. ಅವರಿಗೆ direction ಕೊಟ್ಟಿದ್ದಾರೆ. ಆದರೂ ಇನ್ನೂ ನೀರು ಬಿಡುಗಡೆಯಾಗುತ್ತಿಲ್ಲ. ದಯವಿಟ್ಟು ಕುಡಿಯುವುದಕ್ಕೆ

ಇವತ್ತೇ immediate ಆಗಿ ನೀರು ಬಿಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ):- ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಈಶ್ವರಪ್ಪನವರಿಗೆ ಈಗಾಗಲೆ ಎರಡು ಮೂರು ಸಲ ಹೇಳಿದ್ದೇನೆ. ರಾಜ್ಯದಲ್ಲಿರತಕ್ಕ ನದಿಗಳೇನಿದೆ ಅದನ್ನು ದಯಮಾಡಿ ಒಣಗಲು ಬಿಡಬೇಡಿ. ಏನಾದರು ಮಾಡಿ ನೀರು ಇರುವಂತೆ ಮಾಡಿ. ಏಕೆಂದರೆ, ವನ್ಯ ಸಂಪತ್ತು ಹಾಳಾಗುತ್ತಿದೆ. ಕುಡಿಯಲು ನೀರಿಲ್ಲದೆ ಆನೆಗಳು ಊರಿಗೆ ಬರಲು ಪ್ರಾರಂಭ ಮಾಡಿವೆ. ಹೊಳೆ ಒಣಗದಿದ್ದರೆ ಅವುಗಳೆಲ್ಲಾ ಬದುಕುತ್ತವೆ. ನಮಗೂ ಕುಡಿಯಲು ನೀರು ಬೇಕು. ತುಂಗಭದ್ರಾ ನೀರನ್ನೇ ಇವರೆಲ್ಲರೂ ಕುಡಿಯುವುದು. ಗದಗ್, ಮುಂಡರಗಿ, ಮಾನ್ಯ ಪ್ರಕಾಶ್‌ರವರ ಹೂವಿನಹಡಗಲಿ, ನಾವು.. ಆ ಕಡೆ ಹೊಳೆ ಎಲ್ಲಿಂದ ಹುಟ್ಟುತ್ತದೆ ಅಲ್ಲಿಂದ ನಮ್ಮವರೆಗೆ ಎಲ್ಲರೂ ಆ ಹೊಳೆಯಿಂದಲೇ ನೀರನ್ನು ಕುಡಿಯುವುದು. ಅಲ್ಲಿ ಎಲ್ಲೂ ಬಾವಿ, ಬೋರ್‌ವೆಲ್ಲಗಳು ಇಲ್ಲ. ಬೇಸಿಗೆಯಲ್ಲೂ ಕುಡಿಯುವ ನೀರನ್ನು ಕೊಡುತ್ತೇವೆಂದು ನೀವು ಹೇಳಿದ್ದೀರಿ. ಅಲ್ಲಿ ಎಲ್ಲೇ ಬೋರ್‌ವೆಲ್ ಹಾಕಿದರೂ ನೀರು ಬೀಳುವುದಿಲ್ಲ. ದನಗಳಿಗೆ, ಜನಗಳಿಗೆ, ವನ್ಯ ಪ್ರಾಣಿಗಳಿಗೆ, ರೈತರಿಗೆ ನೀರು ಬೇಕು. ಹೀಗಾಗಿ ಆ ನದಿ ಒಣಗಿದ ಮೇಲೆ ನೀರನ್ನು ಬಿಟ್ಟರೆ ತಗ್ಗಿನವರು ಅರ್ಧ ನೀರನ್ನು ಕುಡಿದುಬಿಡುತ್ತಾರೆ. ಆದ್ದರಿಂದ ನದಿ ಒಣಗದಂತೆ ನೋಡಿಕೊಳ್ಳಿ. ನದಿ ಒಣಗದಂತೆ ಮೊದಲಿನಿಂದಲೇ ಎಷ್ಟೆಷ್ಟು ನೀರನ್ನು ಬಿಡಬೇಕೆಂಬುದನ್ನು ಲೆಕ್ಕ ಮಾಡಿ ಬಿಡುವಂತೆ ನೋಡಿಕೊಳ್ಳಬೇಕು. ಮುಂದಿನ ವರ್ಷ ಕೂಡ ಆ ರೀತಿ ಮಾಡಬೇಕು. ಅವರು ಹೇಳಿದಂತೆ ಈ ವರ್ಷ 300–400 ಕೋಟಿ ಬೆಳೆ ಹಾಳಾಗುತ್ತದೆ. ಅನಂತರ ನಮಗೆ ಕುಡಿಯಲೂ ನೀರಿಲ್ಲ. ಆ ಕಾರಣ ಈಗ ಮಾತ್ರ ನೀರನ್ನು ಬಿಟ್ಟು ಬಂದ್ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಮೇ ತಿಂಗಳಿನಲ್ಲಿ ಮಳೆಯಾಗುವವರೆಗೆ ಹೊಳೆಯಲ್ಲಿ ನೀರು ಇರುವಂತೆ ನೋಡಿಕೊಳ್ಳಬೇಕು. ಆ ರೀತಿ ಮಾಡಿದರೆ ಮಾತ್ರ ನಾವು ಬದುಕುತ್ತೇವೆ. ಇಲ್ಲದಿದ್ದರೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತದೆ. ರೈತರಿಗೆ ತೊಂದರೆಯಾಗುತ್ತದೆ. ಈಗ ಅವರು ಹೇಳಿದಂತೆ ನೀರು ಇಲ್ಲ ಎಂದು ಮಾನ್ಯ ಡಿ.ಆರ್. ಪಾಟೀಲರ ಪ್ರಶ್ನೆಗೆ ನಿಯಮ 359ಅಡಿಯಲ್ಲಿ ಒಂದು ಉತ್ತರವನ್ನು ಕೊಟ್ಟಿದ್ದೀರಿ. ಅದರಲ್ಲಿ ಅಲ್ಲಿನ ಡಿ.ಸಿ. ಯವರೇ ಕೇಳಲಿಲ್ಲವೆಂದು ಕೊಟ್ಟಿದ್ದೀರಿ. ಕೇಳಿ ಬರೆದು ಡಿ.ಸಿ.ಗೆ ಉತ್ತರವನ್ನು ನಿಮ್ಮವರು ಕೊಟ್ಟಿದ್ದಾರೆ. ಆ meeting ಮಾಡುವ ಅವಶ್ಯಕತೆ ಇಲ್ಲ, ಅಲ್ಲಿ ನೀರಿಲ್ಲ, ಹಾಗೆ, ಹೀಗೆ ಎಂದು ಹೇಳಿದ್ದಾರೆ.

ಅವರು ಹೇಳಿರುವ ಪ್ರಕಾರ, ನಿಮ್ಮವರೇ ಕೊಟ್ಟಿರುವ ಪ್ರಕಾರ ಹೆಚ್ಚುವರಿ 11 ಟಿ.ಎಂ.ಸಿ. ನೀರು ಇದೆ. ಎಲ್ಲಾ ಉಪಯೋಗವಾಗಿ ಅಷ್ಟು ಇದೆ. ಈಗ 3–4 ಟಿ.ಎಂ.ಸಿ. immediate ಅವರಿಗೆ ಬಿಟ್ಟು ಅನಂತರ ಒಂದೊಂದು ಟಿ.ಎಂ.ಸಿ. ನೀರನ್ನು ಮೇ ತಿಂಗಳಿನವರೆಗೆ ಬಿಟ್ಟುಕೊಂಡು ಬಂದು ಮಳೆ ಬರುವವರೆಗೆ ದಯಮಾಡಿ ಹೊಳೆಯನ್ನು ಒಣಗಲು ಬಿಡಬೇಡಿ. ಎಂದು ತಮ್ಮ ಮೂಲಕ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ):– ಮಾನ್ಯ ಅಧ್ಯಕ್ಷರೆ, ಹಾವೇರಿಯವರಾದ ನಾವು ಸಹ ತುಂಗಭದ್ರಾದಿಂದ ನೀರನ್ನು ತೆಗೆದುಕೊಳ್ಳುತ್ತಿದ್ದೇವೆ. ಕಳೆದ ತಿಂಗಳು ಎರಡು ಟಿ.ಎಂ.ಸಿ. ನೀರನ್ನು ಬಿಟ್ಟಿದ್ದರು. ಅದರಿಂದ ನಮ್ಮ ಹಾವೇರಿಯವರೆವಿಗೂ ನೀರು ಬಂದು ಮುಟ್ಟಿದೆ. ಮುಂದೆ ನೀರು ಹೋಗಿಲ್ಲ. ಇನ್ನೊಂದು 15 ದಿವಸ ಹೋದರೆ ನಮ್ಮ ಹಾವೇರಿಗೂ ಕುಡಿಯುವ ನೀರಿನ ತೊಂದರೆ ಉದ್ಭವವಾಗುತ್ತದೆ. ಆದ್ದರಿಂದ ಇನ್ನಷ್ಟು ನೀರು ತಕ್ಷಣ ಬಿಡುವ ವ್ಯವಸ್ಥೆಯಾಗಬೇಕು. ಅದರ ಜೊತೆಗೆ ಪ್ರತಿ ವರ್ಷ ಫೆಬ್ರವರಿ ಬಂದರೆ ಹಾವೇರಿ, ಗುತ್ತಲ, ಅಗಡಿ ಗ್ರಾಮ ಮತ್ತು ಸುತ್ತಮುತ್ತಲಿರುವ ಎಲ್ಲಾ ಗ್ರಾಮಗಳಿಗೂ ನೀರಿನ ತೊಂದರೆಯಾಗುತ್ತಿದೆ. ಆದ್ದರಿಂದ ಹಾವೇರಿಯ ಹತ್ತಿರ ಹಾವನೂರು ಮತ್ತು ಹಾವಶಿ ಗ್ರಾಮಗಳ ಮಧ್ಯೆ ಒಂದು ಬ್ರಿಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಬೇಕೆಂದು ಸಾಕಷ್ಟು ದಿವಸಗಳಿಂದ ನಾವು ಒತ್ತಾಯವನ್ನು ಮಾಡುತ್ತಿದ್ದೇವೆ. ಅದನ್ನು ಮಾಡುವುದರಿಂದ ಆ ಭಾಗದಲ್ಲಿರುವ ಎಲ್ಲಾ ಗ್ರಾಮಗಳವರೆಗೆ, ರಾಣೆಬೆನ್ನೂರಿನವರೆಗೆ, ಬ್ಯಾಡಗಿ, ರಾಣೇಬೆನ್ನೂರು ನಗರಕ್ಕೆ ಇವತ್ತು ತುಂಗಭದ್ರಾದಿಂದಲೇ ನೀರನ್ನು ತೆಗೆದುಕೊಳ್ಳುತ್ತಿರುವುದರಿಂದ ಅಲ್ಲಿ ಬ್ಯಾರೇಜನ್ನು ಕಟ್ಟಿದರೆ ರಾಣೇಬೆನ್ನೂರು, ಬ್ಯಾಡಗಿ, ಹಾವೇರಿ, ಸವಣೂರು ಈ ಎಲ್ಲಾ ನಗರಗಳಿಗೂ ನೀರನ್ನು ಪಡೆದುಕೊಳ್ಳಬಹುದಾಗಿದೆ. ಆದ್ದರಿಂದ ತಕ್ಷಣ ಹಾವನೂರ್ ಭಾಗದಲ್ಲಿ ಬ್ರಿಜ್ ಕಂ ಬ್ಯಾರೇಜನ್ನು ನಿರ್ಮಾಣ ಮಾಡಬೇಕು. ಬೇಸಿಗೆಯಲ್ಲೇನು ನಾವು ಕುಡಿಯುವ ನೀರಿನ ಭೀಕರತೆಯನ್ನು ಅನುಭವಿಸುತ್ತಿದ್ದೇವೆ ಅದನ್ನು ಅಲ್ಲಿ ಬ್ಯಾರೇಜ್ ನಿರ್ಮಾಣ ಮಾಡುವುದರ ಮೂಲಕ ಬಗೆಹರಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೆ, ಕಳೆದಸಲ ಮಾನ್ಯ ಶಾಸಕರು ಕೊಟ್ಟಂಥ ಸಲಹೆಗಳನ್ನು ತೆಗೆದುಕೊಂಡು, ಆ ಭಾಗದ ಶಾಸಕರು, ಈ ಭಾಗದ ರೈತರು, ಒಟ್ಟಿಗೆ ಎಲ್ಲರನ್ನೂ ಕೂರಿಸಿಕೊಂಡು

ಆ ಸಮಸ್ಯೆಯನ್ನು ಪರಿಹಾರ ಮಾಡಿದ್ದು ಅವರುಗಳ ಸಹಕಾರದಿಂದಲೇ. ಕಳೆದ ಬಾರಿಯೇ ಗದಗ್ ನೀರಿನ ಬಗ್ಗೆ ಇರಬಹು, ಪಾಟೀಲರು ಹೇಳಿದ ನೀರಿನ ಬಗ್ಗೆ ಇರಬಹುದು, ಅಲ್ಲಿಯ ಭಾಗದ ರೈತರನ್ನು ಕೂರಿಸಿ ಒಪ್ಪಿಸಿ ನೀರನ್ನು ಬಿಟ್ಟಿದೆ. ನಾನು ಏತಕ್ಕಾಗಿ ಇಲ್ಲಿ specific ಆಗಿ ಇಷ್ಟೇ ನೀರನ್ನು ಇಂಥ ತಾರೀಖಿನೊಳಗೆಯೇ ಬಿಡಲು ಆಗುವುದಿಲ್ಲವೆಂದರೆ, ಸಂಬಂಧಪಟ್ಟ ವ್ಯಕ್ತಿಗಳನ್ನು ಕೂರಿಸಿಕೊಳ್ಳಬೇಕು, ಎಷ್ಟು ನೀರಿದೆ ಎಂಬುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಆ ಮಾಹಿತಿಯನ್ನು ತೆಗೆದುಕೊಂಡು ಖಂಡಿತ ನಿಮಗೆ ಅನ್ಯಾಯವಾಗದ ರೀತಿಯಲ್ಲಿ ನಾನು ಗಮನ ಕೊಡುತ್ತೇನೆ. ನಾನು ಸುಮ್ಮನೆ ಏನೋ ಒಂದು ಆಶ್ವಾಸನೆಯನ್ನು ಕೊಡಲು ಇಷ್ಟಪಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಇದೇನು ವಿಷೇಶವಾದಂಥದ್ದಲ್ಲ. ತಮಗೆ ಗೊತ್ತಿದ್ದಂತೆ ಕಳೆದ ಐದಾರು ವರ್ಷದಿಂದ ಇದೇ ರೀತಿ ಬಿಟ್ಟುಕೊಂಡು ಬಂದಿದ್ದಾರೆ. ಯಾವಾಗ ನೀರಿನ availability ಇದೆ utilization ಮಾಡುವುದಕ್ಕೋಸ್ಕರ. ಇದು naturally ತುಂಗಾ, ಭದ್ರ ಮುಂದೆ ಸೇರಿ ತುಂಗಭದ್ರಾ ಆಗುತ್ತದೆ. ಹೆಚ್ಚುಕಡಿಮೆ ಮೂರು ನದಿಗಳು ಇರುವುದರಿಂದ ಕುಡಿಯುವ ನೀರಿನ ಸಮಸ್ಯೆ ಅವರುಗಳಿಗೆ ಆಗುತ್ತದೆ. ವಿಷೇಶವಾಗಿ ಬೆಳೆಗಳಿಗೆ ನೀರು ಬೇಕಾಗಿದ್ದು ತುಂಗಭದ್ರಾದವರಿಗೆ, ನೀವು ಮುಂದೆ ನೀರನ್ನು ಬಿಟ್ಟರೂ ಅದು ಆಂಧ್ರಕ್ಕೆ ಹೋಗುತ್ತದೆ. ಆದ್ದರಿಂದ, ಯಾವಾಗ ಅವಶ್ಯಕತೆ ಇದೆ ಆ ತಿಂಗಳಿನಲ್ಲೇ ತಮ್ಮ ಭಾಗದ, ಭದ್ರಾ ಭಾಗದ ರೈತರನ್ನು convince ಮಾಡಿ ಬೇಗನೆ ಬಿಟ್ಟರೆ ಒಳ್ಳೆಯದಾಗುತ್ತದೆ. Time ಮೀರಿಬಿಟ್ಟರೆ ಪ್ರಯೋಜನ ವಾಗುವುದಿಲ್ಲ.

ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ಅರಸೀಕೆರೆ ಬರಗಾಲದಿಂದ ತತ್ತರಿಸಿ ಹೋಗಿರುವ ತಾಲ್ಲೂಕಾಗಿದೆ. ನಮ್ಮಲ್ಲಿ ನದಿ ನೀರಿಲ್ಲ, ಚಾನಲ್ಗಳಿಲ್ಲ. 400–500 ಅಡಿ ಬೋರನ್ನು ಕೊರೆಸಿದರೂ ನೀರಿನ ಅಭಾವವಾಗಿದೆ. ನಮ್ಮಲ್ಲಿ ಸುಮಾರು 26 ಗ್ರಾಮದಲ್ಲಿ fluoride ಅಂಶವಿದೆ. ಏಕೆಂದರೆ, ಇಲ್ಲಿರುವವರಿಗೆ ಹಲ್ಲುಗಳು ಸವೆಯತಕ್ಕದ್ದು, ಕಣ್ಣಿನ ದೃಷ್ಟಿ ಕಡಿಮೆಯಾಗುವುದು, ಮೂಳೆ ಸವೆಯುವುದು ಆಗಿರುವ ಸಂದರ್ಭದಲ್ಲಿ ಬಹುಶ: ಭದ್ರಾಮೇಲ್ದಂಡೆ ಯೋಜನೆ ತರೀಕೆರೆಗೆ ಬರತಕ್ಕದ್ದು, ತರೀಕೆರೆಯಿಂದ ಕಡೂರಿಗೆ ಬರತಕ್ಕದ್ದು, ಕಡೂರಿನಿಂದ ಅರಸೀಕೆರೆಗೆ ಏನಾದರು ತಂದುಕೊಟ್ಟು ಆ ಕೆರೆಕಟ್ಟೆಗಳಿಗೆ ನೀರನ್ನು ಹಾಯಿಸಿದರೆ ನಿಜವಾಗಿ ಈ fluoride ನಿವಾರಣೆ ಮಾಡುವ ಅತ್ಯವಶ್ಯಕತೆ ಇದೆ. ಹಾಗೆಯೇ ಹೊನ್ನವಳ್ಳಿ ಕೆರೆಯ ಏತ ನೀರಾವರಿ

ಯೋಜನೆ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಇದನ್ನು ಏನಾದರು ಮಾಡಿ ಚಾಲನೆ ಮಾಡಿದರೆ ಹೊನ್ನವಳ್ಳಿಯಿಂದ ಕಾಮಸಮುದ್ರ, ಜೆ.ಸಿ.ಪುರ, ಕನಕಟ್ಟೆ, ಕಡೂರು ಮತ್ತು ಹೊಸದುರ್ಗಕ್ಕೂ ಹೋಗತಕ್ಕದ್ದು ಆಗುತ್ತದೆ. ವರ್ಷಕ್ಕೆ ಒಮ್ಮೆಯಾದರು ಆ ಕೆರೆಕಟ್ಟೆಗಳಿಗೆ ನೀರನ್ನು ಕೊಟ್ಟರೆ ಈ fluoride ನಿವಾರಣೆಯಾಗುತ್ತದೆ ಎಂದು ನೀರಾವರಿ ಸಚಿವರಲ್ಲಿ ಬೇಡಿಕೊಳ್ಳುತ್ತಿದ್ದೇನೆ. ದಯಮಾಡಿ ಅವಕಾಶ ಮಾಡಿಕೊಡಿ. ಭದ್ರಾಮೇಲ್ದಂಡೆಯನ್ನಾದರೂ ಕೊಡಿ ಇಲ್ಲದ್ದಿದ್ದರೆ ಹೊನ್ನವಳ್ಳಿ ಏತ ನೀರಾವರಿಯನ್ನಾದರೂ ಕೊಡಿ ಎಂದು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಹೊನ್ನವಳ್ಳಿ ಕೆರೆಯ ಬಗ್ಗೆ ಅವರು ಶಾಸಕರಾದಾಗಿನಿಂದಲೂ ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಹೊಸ ಯೋಜನೆಯಾಗುತ್ತಿರುವುದರಿಂದ ಇದನ್ನು ಎಷ್ಟರ ಮಟ್ಟಿಗೆ ತೆಗೆದುಕೊಳ್ಳಬೇಕು, ಇದರ ನೀರಿನ availability ಏನು ಎಂಬುದನ್ನು ನೋಡಿಕೊಂಡು ಈ ಭಾಗದಲ್ಲೇನು ಅನುಕೂಲ ಮಾಡಲು ಆಗುತ್ತದೆ ಅದನ್ನು ಖಂಡಿತ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಸಿದ್ದು ಕಲ್ಲಪ್ಪ ಸವದಿ (ಜಮಖಂಡಿ):- ಮಾನ್ಯ ಅಧ್ಯಕ್ಷರೆ, ಕೃಷ್ಣಾದಲ್ಲೂ ಬೇಸಿಗೆಯಲ್ಲಿ ಸಮಸ್ಯೆ ಬಂದೊದಗಿದೆ. ಯಾವರೀತಿಯಾಗಿ ಕಾವೇರಿಗೆ ನ್ಯಾಯಾಧಿಕರಣದ ತೀರ್ಪಿನಿಂದ ಅನ್ಯಾಯವಾಗಿದೆ ಅದೇ ರೀತಿ ಭವಿಷ್ಯದಲ್ಲಿ ಕೃಷ್ಣಾ ನದಿಗೂ ಅಂಥದ್ದೇ ತೀರ್ಪು ಬರುವ ಸಂಭವವಿದೆ. ಅದಕ್ಕಾಗಿ ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಲು ಬಯಸುವುದೇನೆಂದರೆ, ಈಗೇನು ಕೃಷ್ಣಾಕ್ಕೆ ನ್ಯಾಯಾಧಿಕರಣವನ್ನು ನೇಮಿಸಿದ್ದೀರೋ.. ಈಗ ಕಾವೇರಿಯಲ್ಲಿ ಯಾವ ರೀತಿಯಾಗಿ ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ ವರೆಗೆ ನೀರು ಬಿಡುವ ಬಗ್ಗೆ ನ್ಯಾಯಾಧಿಕರಣ ತೀರ್ಪು ಕೊಟ್ಟಿದೆಯೋ ಆ ರೀತಿ ರಾಜ್ಯ ಸರ್ಕಾರದಿಂದ ನಮ್ಮ ನ್ಯಾಯಾಧಿಕರಣದ ಮುಂದೆ ಸಮರ್ಥವಾಗಿ ವಾದ ಮಾಡುವಂಥ ನ್ಯಾಯವಾದಿಗಳನ್ನು ನೇಮಕ ಮಾಡುವ ಮೂಲಕ ನಮಗೂ ಮಹಾರಾಷ್ಟ್ರದ ಕೊಯ್ನಾ ಅಣೆಕಟ್ಟೆಯಿಂದ ಕಾಲಕಾಲಕ್ಕೆ ನಮ್ಮ ರೈತರಿಗೆ, ಕೃಷ್ಣಾಕ್ಕೆ, ಉತ್ತರ ಕರ್ನಾಟಕದ ಬಾಗಲಕೋಟೆ ಇರಬಹುದು, ಬಿಜಾಪುರ, ಬೆಳಗಾಂ ಜಿಲ್ಲೆಗಳು ಇರಬಹುದು, ಆ ಜಿಲ್ಲೆಗಳ ನೂರಾರು ಹಳ್ಳಿಗೆ ಬೇಸಿಗೆಯಲ್ಲಿನ ನೀರಿನ ಕೊರತೆಯನ್ನು ನೀಗಿಸಿಕೊಡಲು ಆ ನ್ಯಾಯಾಧಿಕರಣ ಬರುವ ಪೂರ್ವದಲ್ಲಿ ಸರ್ಕಾರ ಅದರ ಬಗ್ಗೆ ಯೋಚನೆ ಮಾಡಬೇಕು ಎಂಬ ಮಾತನ್ನು ಈ ಸಭೆಯ

ಮೂಲಕ ಹೇಳಬಯಸುತ್ತೇನೆ. ನಮ್ಮ ದೌರ್ಬಲ್ಯವೇನೋ ಬೇರೆ ರಾಜ್ಯದಲ್ಲಿ ಹುಟ್ಟಿರತಕ್ಕಂಥ ನದಿಗಳ ನೀರನ್ನು ಸಹ ಪಡೆಯುವ ಸಾಮರ್ಥ್ಯ ಏಕೋ ನಮಗೆ ಇಲ್ಲ. ಆದರೆ, ನಮ್ಮ ರಾಜ್ಯದಲ್ಲೇ ಹುಟ್ಟಿ ನಮ್ಮ ರಾಜ್ಯದ ಹೆಚ್ಚಿನ ಪ್ರದೇಶವನ್ನು ಪ್ರಸರಿಸಿರುವ ನದಿಯ ನೀರಿನ ಹೆಚ್ಚಿನ ಪಾಲನ್ನೂ ಪಡೆಯುವ ಸಾಮರ್ಥ್ಯವೂ ನಮಗಿಲ್ಲ. ಈ ರೀತಿ ಏಕಾಗುತ್ತದೋ? ಯಾರ ದೌರ್ಬಲ್ಯವೋ, ಯಾರು ಯಾರಿಗೆ ಈಲ್ಡ್ ಅಗಿದ್ದಾರೋ ಗೊತ್ತಿಲ್ಲ. ಈ ರೀತಿ ಪರಿಸ್ಥಿತಿ ಬರುವ ಪೂರ್ವದಲ್ಲಿ ನಮ್ಮ ಸರ್ಕಾರ ಅದರ ಬಗ್ಗೆ ಯೋಗ್ಯ ನಿರ್ಣಯವನ್ನು ತೆಗೆದುಕೊಳ್ಳುವುದರ ಮೂಲಕ ಕೃಷ್ಣಾ ನ್ಯಾಯಾಧಿಕರಣದ ಮೂಲಕ ಸಮರ್ಥವಾಗಿ ವಾದ ಮಾಡಲು ನ್ಯಾಯಾಧೀಶರನ್ನು ನೇಮಕ ಮಾಡಬೇಕು. ಕಾಲಕಾಲಕ್ಕೆ ಯಾವರೀತಿಯಾಗಿ ತಮಿಳುನಾಡಿನವರು ಕಾವೇರಿ ನೀರನ್ನು ಪಡೆಯುತ್ತಾರೊ ಆ ರೀತಿ ನಮಗೆ ಬೇಸಿಗೆಯಲ್ಲಿ ಕೊಯ್ನಾ ನೀರನ್ನು ಕೃಷ್ಣಾ ನದಿಯ ಮೂಲಕ ಉತ್ತರ ಕರ್ನಾಟಕಕ್ಕೆ ದೊರೆಯುವಂತೆ ಮಾಡಬೇಕು. ಒಂದು ವೇಳೆ ಅದು ದೊರೆಯದೇ ಹೋದಲ್ಲಿ ಬೇಸಿಗೆಯಲ್ಲಿ ಸಾವಿರಾರು ಕೋಟಿ ರೂಪಾಯಿ ಬೆಳೆ ಹಾಳಾಗುತ್ತದೆ. ಕುಡಿಯುವ ನೀರಿಗೆ ತೊಂದರೆಯಾಗುತ್ತದೆ. ಕೊಯ್ನಾ ಡ್ಯಾಂನಲ್ಲಿ 100 ಟಿ.ಎಂ.ಸಿ. ನೀರನ್ನು ಕಾಯ್ದಿಡುವುದರ ಮೂಲಕ ಮಳೆಗಾಲದಲ್ಲಿ ಒಮ್ಮೆಗೇ ನೀರನ್ನು ಬಿಡುವುದರಿಂದ ನಮ್ಮ ಉತ್ತರ ಕರ್ನಾಟಕ ಪ್ರವಾಹ ಪರಿಸ್ಥಿತಿಯಿಂದ ಹಾನಿಯನ್ನು ಅನುಭವಿಸುವ ಸಂಭವವಿದೆ. ಆದ್ದರಿಂದ, ಕಾಲಕಾಲಕ್ಕೆ ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ ವರೆಗೆ ಹಂತ ಹಂತವಾಗಿ ಕೊಯ್ನಾ ಡ್ಯಾಂ ನಿಂದ ನೀರನ್ನು ಬಿಡುವಂತೆ ವಾದ ಮಂಡಿಸಲು ನ್ಯಾಯಾಧೀಕರಣಕ್ಕೆ ಯೋಗ್ಯ ನ್ಯಾಯವಾದಿಗಳನ್ನು ನೇಮಕ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಬೇಸಿಗೆಯಲ್ಲಿ ಕೊಯ್ನಾ ಡ್ಯಾಂ ನಿಂದ 2 ಟಿ.ಎಂ.ಸಿ. ನೀರನ್ನು ಬಿಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಅದರ ಜೊತೆಗೆ ಕಾಲಕಾಲಕ್ಕೆ ನಮ್ಮ ತಾಲ್ಲೂಕಿನ ಹಾಗೂ ಬೆಳಗಾಂ ಜಿಲ್ಲೆಯ ಹತ್ತಾರು ಹಳ್ಳಿಗಳಿಗೆ ಸಣ್ಣದಾದ ಬ್ಯಾರೇಜನ್ನು ಕಟ್ಟುವುದರ ಮೂಲಕ ಮತ್ತು ತುರ್ತಾಗಿ ನೀರಿನ ಸಮಸ್ಯೆಯನ್ನು ನೀಗಿಸಲು ಸುಮಾರು 10 ಕೋಟಿ ವೆಚ್ಚದ ಬ್ಯಾರೇಜನ್ನು ಜಮಖಂಡಿ ಮತ್ತು ಬೆಳಗಾಂ ಜಿಲ್ಲೆಗೆ ಸೀಮಿತವಾಗಿ ಕಟ್ಟಿಕೊಟ್ಟರೆ ನಮಗೆ ಬಹಳ ಅನುಕೂಲವಾಗುತ್ತದೆ. ಬೇಸಿಗೆಯಲ್ಲಿ ಒಂದೆರಡು ತಿಂಗಳಾದರೂ ನೀರಿನ ಅಭಾವವನ್ನು ತಡೆದುಕೊಳ್ಳುವಂಥ ಸಾಮರ್ಥ್ಯ ನಮಗೆ ಬರುತ್ತದೆ. ತುರ್ತಾಗಿ ಕೃಷ್ಣಾ ನ್ಯಾಯಾಧೀಕರಣದ ಬಗ್ಗೆ ಚಾಲನೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ [ಜಲ ಸಂಪನ್ಮೂಲ ಸಚಿವರು]:– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಪ್ರಸ್ತಾಪ ಮಾಡಿದಂತಹ ಕೊಯ್ನಾ ಮತ್ತು ಚಿತ್ರಾ, ಆ ಎರಡರ ಬಗ್ಗೆಯೂ ಮಾರ್ಚ್ 5ನೇ ತಾರೀಖು ಮಹಾರಾಷ್ಟ್ರ ಸರ್ಕಾರದ ಜೊತೆಗೆ ಮಾತುಕತೆ ನಡೆಸಿ, ಆ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಹಾಗೂ ಆ ಭಾಗಕ್ಕೆ ನೀರನ್ನು ಬಿಡಿಸಲಿಕ್ಕೆ ನಾವು ಏನೊಂದು ಪ್ರಯತ್ನವನ್ನು ನಡೆಸಬೇಕೋ ಅದನ್ನು ಮಾಡುತ್ತೇವೆ. ಕೃಷ್ಣಾ ನ್ಯಾಯಾಧಿಕರಣದ ಬಗ್ಗೆ ಬಹಳ ವಿಶೇಷವಾದ ಆಸಕ್ತಿಯನ್ನು ಮಾನ್ಯ ಸದಸ್ಯರು ತೋರಿಸಿದ್ದಾರೆ. ಸರ್ಕಾರ ಅವರ ಆಸಕ್ತಿಗೆ ತಕ್ಕ ರೀತಿಯಲ್ಲಿ ಸ್ಪಂದಿಸುತ್ತದೆಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಚರ್ಚೆ. ಈಗ ಮಾನ್ಯ ರೆಡ್ಡಿಯವರು ಮಾತನಾಡಲಿ.

[ಗೊಂದಲ]

ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ನೋಟೀಸ್ ಕೊಡದೇ ಪ್ರಸ್ತಾಪ ಮಾಡುತ್ತಿದ್ದೀರಿ. ಯಾರೋ ಪ್ರಸ್ತಾಪ ಮಾಡಿದ್ದರ ಜೊತೆಗೆ ನಮ್ಮದೂ ಇರಲಿ ಎಂಬ ಭಾವನೆಯಿಂದ ಮಾತನಾಡುತ್ತಿದ್ದೀರಿ. ಇದು ಸರಿಯಲ್ಲ. ಈ ಬಗ್ಗೆ ನಾನು ತಮಗೆ ಎಷ್ಟು ಬಾರಿ ಹೇಳಬೇಕು? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರೆಡ್ಡಿಯವರು ಮಾತನಾಡಲಿ.

6. ನಿಯಮ 69ರ ಮೇರೆಗೆ

ವಿಷಯ: ಬೆಂಗಳೂರು ಹಾಗೂ ರಾಜ್ಯದ ಇತರೆ ಪ್ರದೇಶಗಳಲ್ಲಿ ಕೋಮು ಗಲಭೆಯಿಂದಾಗಿ ಉಂಟಾಗಿರುವ ತೊಂದರೆಗಳ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ [ಬಾಗೇಪಲ್ಲಿ]:– ಮಾನ್ಯ ಅಧ್ಯಕ್ಷರೆ, ಈ ಕೋಮು ಗಲಭೆಗಳಿಗೆ ಸಂಬಂಧಪಟ್ಟಂತೆ ನಾನು, ಮಾನ್ಯ ಮಾಧುಸ್ವಾಮಿಯವರು, ಮಾನ್ಯ ರಾಜೇಂದ್ರನ್‌ರವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ನಿಯಮ 69ರ ಮೇರೆಗೆ ಚರ್ಚಿಸಲು ನೋಟೀಸ್ ಅನ್ನು ಕೊಟ್ಟಿದ್ದೇವೆ. ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. JD[S] and BJP ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ 10–12 ತಿಂಗಳ ಅವಧಿಯಲ್ಲಿ ಎರಡು ಕಡೆ ಗಂಭೀರವಾಗಿ ಕೋಮು ಗಲಭೆಗಳಾಗಿ ಇಡೀ ರಾಜ್ಯದ ಜನತೆ ಆತಂಕದ ಸ್ಥಿತಿಗೆ ಒಳಪಟ್ಟಿತ್ತು. ಒಂದು, ಮಂಗಳೂರಿನಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ನಡೆದಂತಹ ಕೋಮು ಗಲಭೆ. ಎರಡನೆಯದು, ಜನವರಿ ತಿಂಗಳ 19ರಿಂದ 21ರವರೆಗೂ